# ನೇಸರು

₹ 5/-

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole    Vol XXXIV - 10    October 2016

PAGES 16



ಅಸೋಸಿಯೇಶನ್‌ನಲ್ಲಿ ಶ್ರೀ ಗಣೇಶೋತ್ಸವ

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574


Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ ಸಂಭ್ರಮದ ಗಣೇಶೋತ್ಸವ












ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 34** **ಅಕ್ಟೋಬರ್ 2016** **ಸಂಚಿಕೆ 10**

ಪುರಾಣ ಕಾಲದಿಂದಲೂ ಹೆಣ್ಣಿಗೆ ಪೂಜ್ಯನೀಯ ಸ್ಥಾನವನ್ನು ಕಲ್ಪಿಸಲಾಗಿತ್ತು. ಪುರಾಣ ಕಾಲದಲ್ಲಿ ಆದಿಶಕ್ತಿ, ದುಷ್ಟಶಿಕ್ಷಕಿ, ಶಿಷ್ಟರಕ್ಷಕಿ, ಸರ್ವಶಕ್ತಿಯಾಗಿ ಮೆರೆದಿರುವುದನ್ನು ಕಾಣಬಹುದು. ನಮ್ಮ ಅನೇಕ ಶಾಸ್ತ್ರಗಳಲ್ಲಿ ಹೆಣ್ಣನ್ನು ಜಗಜನನಿಯೆಂದು ಕರೆಯಲಾಗುತ್ತದೆ. ಹಾಗಾಗಿ ಹಿರಿಯರು "ಕಾರ್ಯೇಷು ದಾಸಿ, ಸಲಹೇಷು ಮಂತ್ರಿ, ಭೋಜೇಷು ಮಾತ, ಶಯನೇಷು ರಂಬಾ ನಾರಿ ಕ್ಷಮಯಾಧರಿತ್ರಿ" ಎಂದಿದ್ದಾರೆ. ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ಅಭಿಪ್ರಾಯಕ್ಕೆ ನಮ್ಮ ಭಾರತೀಯ ಸಂಸ್ಕೃತಿ ಬದ್ಧವಾಗಿದೆ. ನಾವು ಹೆಣ್ಣುಮಕ್ಕಳನ್ನು ಕಾಣುವ ರೀತಿ ಮತ್ತು ಹೆಣ್ಣು ನಮ್ಮ ಸಮಾಜದಲ್ಲಿ ಎಂತಹ ಮಹತ್ವದ ಪಾತ್ರವಹಿಸುತ್ತಾಳೆ ಎನ್ನೋದನ್ನು ನಮ್ಮ ವೇದಗಳು ಸಾರುತ್ತಾ ಬಂದಿದೆ.

ವೇದಗಳಲ್ಲಿ ಹೆಣ್ಣಿನ ಬಗ್ಗೆ ಹೇಳಿರುವ ಈ ಮೇಲಿನ ಮಾತುಗಳನ್ನು ಕೇಳುವಾಗ ಕಿವಿಗೆ ಇಂಪಾಗುತ್ತದೆ, ಯಾವುದೋ ಒಂದು ಶಕ್ತಿ ನಮ್ಮ ಮೈ ತುಂಬಾ ಹರಿದಾಡಿದ ಅನುಭವ. ಆದರೆ ಇಂದು ಎಲ್ಲಿ ನೋಡಿದರೂ ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರ, ದೌರ್ಜನ್ಯವನ್ನು ನೋಡಿದರೆ, ಹೆಣ್ಣನ್ನು ಪೂಜ್ಯನೀಯ ಸ್ಥಾನದಲ್ಲಿರಿಸಿದರೂ ಏನೂ ಪ್ರಯೋಜನವಿಲ್ಲ ಎನಿಸುತ್ತದೆ. ಹೇಗೆ ದೇವರು ಎಲ್ಲರ ಸ್ವತ್ತೋ ಹಾಗೆ ಹೆಣ್ಣು ಮಕ್ಕಳು ಎಲ್ಲರ ಸ್ವತ್ತು ಎನ್ನುವ ಭಾವ ಬೆಳೆದಂತಿದೆ. ಕೇವಲ ವೇದಿಕೆಯಲ್ಲಿ ಕುಳಿತು ಭಾಷಣ ಮಾಡುವುದಕ್ಕೆ ಮಾತ್ರ ಸೀಮಿತವಾದಂತಿದೆ.

ಹೆಣ್ಣುಮಕ್ಕಳು ತಮಗೆ ಆದ ಅನ್ಯಾಯವನ್ನು ಪ್ರತಿಭಟಿಸಿದರೂ, ಕೊನೆಯಲ್ಲಿ ತಪ್ಪಿತಸ್ಥರಿಗೆ ಸಿಗುವುದು ಕ್ಷಮೆ, ಯಾಕೆಂದರೆ ಹೆಣ್ಣು ಕ್ಷಮೆಯಾಧರಿತ್ರಿ ಅಲ್ಲವೇ?. ಅಂದರೆ ಪುರಾಣದಲ್ಲಿ ಹೆಣ್ಣಿನ ಬಗ್ಗೆ ಹೇಳಿರುವ ಮಾತುಗಳನ್ನು ಬಲವಂತವಾಗಿ ಹೆಣ್ಣುಮಕ್ಕಳ ಮೇಲೆ ಹೇರಲಾಗುತ್ತದೆ. ಆ ಹೆಣ್ಣಿಗೆ ಮನಸಿರಲಿ, ಮನಸ್ಸಿಲ್ಲದಿರಲಿ ಅವಳು ತನಗೆ ಅನ್ಯಾಯ ಮಾಡಿದವರನ್ನು ಕ್ಷಮಿಸಲೇ ಬೇಕು. ಪತಿ ತಪ್ಪಿತಸ್ಥನಾದರೆಅವನ ಪತ್ನಿ ಇನ್ನೊಂದು ಅವಕಾಶವನ್ನು ನೀಡಲೇಬೇಕು. ಅವನನ್ನು ಕ್ಷಮಿಸಲೇಬೇಕೆಂಬ ಒತ್ತಾಯ ಅವಳ ಮೇಲೆ ಹೇರಲಾಗುತ್ತದೆ. ಆ ಒತ್ತಡಕ್ಕೆ ಮಣಿದು ಆಕೆ ಆತನನ್ನು ಕ್ಷಮಿಸಬೇಕಾಗುತ್ತದೆ. ಅದೇ ಒಂದು ವೇಳೆ ಹೆಣ್ಣು ತಪ್ಪಿತಸ್ಥಳಾದರೆ, ಗಂಡು ಯಾಕೆ ಹೆಣ್ಣಿಗೆ ಇನ್ನೊಂದು ಅವಕಾಶವನ್ನು ನೀಡುವುದಿಲ್ಲ. ಅವರ ಬಾಯಿಯಿಂದು ಬರುವುದು ಒಂದೇ ಮಾತು, 'ನಾನು ನಿನ್ನನ್ನು ಕ್ಷಮಿಸಲಿಕ್ಕೆ ನಾನು ರಾಮನಲ್ಲ' ಅನ್ನೋದು. ಹೆಣ್ಣಾದ ಅವಳಿಗೆ ಇಷ್ಟು ಹಠ ಇರಬೇಕಾದರೆ, ಗಂಡಾದ ನನಗೆಷ್ಟಿರಬೇಕೆಂಬ ಭಾವ ಪುರುಷರಲ್ಲಿರುತ್ತದೆ.ಹಾಗಿದ್ದರೆ ಇವಳು ಕೂಡ ಸೀತೆಯಲ್ಲ ಅನ್ನೋದು ಯಾಕೆ ಅವರಿಗೆ ಅರ್ಥವಾಗುತ್ತಿಲ್ಲ?. ಸೀತೆ ಒಬ್ಬ ದೇವತಾಸ್ತ್ರಿ, ಅಗ್ನಿಗೆ ಹಾರಿದರೂ ಬದುಕಿ ಬಂದಳು, ಆದರೆ ಇವತ್ತಿನ ಆಧುನಿಕ ಯುಗದಲ್ಲಿ ಇದೆಲ್ಲ ಎಲ್ಲಿ ಸಾಧ್ಯ?

ತಂದೆ ತಾಯಿಯರು ಕೂಡ ಹೆಣ್ಣು ಮಕ್ಕಳಿಗೆ ಕಲಿಸೋದು ಇದನ್ನೆ, ನೀನು ಹೆಣ್ಣು, ಸ್ವಲ್ಪ ತಗ್ಗಿ ಬಗ್ಗಿ ನಡೆಯಬೇಕು. ಅಂದರೆ ಬಾಲ್ಯದಿಂದಲೇ ಹೆಣ್ಣು ಮಕ್ಕಳಿಗೆ ಸಹನೆಯ ಪಾಠ ಹೇಳಿಕೊಡಲಾಗುತ್ತದೆ. ಒಂದು ರೀತಿಯಲ್ಲಿ ಇದು ಒಳ್ಳೆಯ ಆಚಾರವೇ. ಆದರೆ ಎಲ್ಲ ಕಡೆ ಇದು ಅನ್ವಯಿಸುವುದಿಲ್ಲ. ತನ್ನ ಮೇಲಾಗುತ್ತಿರುವ ಅನ್ಯಾಯವನ್ನೂ ಸ್ತ್ರೀ ಪ್ರತಿಭಟಿಸಲು ಶಕ್ಯವಾಗುತ್ತಿಲ್ಲ ಅಂದರೆ ಅದು ಅವಳ ದೌರ್ಭಾಗ್ಯವೇ ಸರಿ.

ಮುರಿದುಹೋದ ಕನ್ನಡಿಯನ್ನು ನೀವು ಎಷ್ಟೇ ಜೋಡಿಸಲೂ ಪ್ರಯತ್ನಿಸಿದರೂ ಅದರ ಮಧ್ಯೆ ಕಂಡು ಬರುವ ಅಂತರ ಎದ್ದು ಕಾಣುತ್ತದೆ. ಒಮ್ಮೆ ಮನಸ್ಸಿನ ಭಾವನೆಗಳಿಗೆ ನೋವುಂಟಾದರೆ, ಅದರ ಗಾಯ ಮರೆಯಲಿಕ್ಕೆ ಬಹಳ ಸಮಯ ತಾಗುತ್ತದೆ. ಯಾಕೆಂದರೆ ಅವಳು ಕೂಡ ಒಂದು ಜೀವ, ಅವಳಿಗೂ ಒಂದು ಮನಸ್ಸಿದೆ, ಆ ಮನಸ್ಸಿಗೂ ನೋವುಂಟಾಗುತ್ತದೆ ಎನ್ನುವುದು ಗಂಡಿಗೆ ಏಕೆ ಅರ್ಥವಾಗುವುದಿಲ್ಲ? ಒಂದು ವೇಳೆ ಹೆಣ್ಣು ಗಂಡಿನ ಕ್ಷಮೆಯನ್ನು ದಿಕ್ಕರಿಸಿದ್ದೇ ಆದರೆ, ಅಬ್ಬಾ ಅವಳಿಗೆ ಎಷ್ಟು ಸೊಕ್ಕು? ಎನ್ನುತ್ತಾರೆ. ಅವಳ ಮನದೊಳಗಿರುವ ದುಗುಡ ಯಾರಿಗೂ ಕಾಣುವುದಿಲ್ಲ.

ಸರ್ವಜ್ಞ ಹೆಣ್ಣಿನ ಮಹತ್ವವನ್ನು ಹೀಗೆ ಹೇಳಿದ್ದಾನೆ.

"ಹೆಣ್ಣಿಂದಲೇ ಇಹವು ಹೆಣ್ಣಿಂದಲೇ ಪರವು
ಹೆಣ್ಣಿಂದಲೇ ಸಕಲ ಸಂಪದವು ಹೆಣ್ಣೊಲ್ಲ
ದಣ್ಣಗಳು ಯಾರು ಸರ್ವಜ್ಞ"

ಇನ್ನು ನಮ್ಮ ಸಂಚಿ ಹೊನ್ನಮ್ಮ ಹೆಣ್ಣಿನ ಬಗ್ಗೆ ಹೇಳಿರುವ ಈ ಮಾತುಗಳು ಹೆಣ್ಣಿನ ಮಹತ್ವವನ್ನು ವಿಶದಪಡಿಸಿರುವುದನ್ನು ಗಮನಿಸಬಹುದು.

"ಪೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ನಮ್ಮನ್ನೆಲ್ಲ ಪೊರೆದವಳು
ಪೆಣ್ಣು ಪೆಣ್ಣೆಂದು ಬೀಳುಗಳೆವರೇಕೆ
ಕಣ್ಣು ಕಾಣದ ಗಾವಿಲರು"

ಹೆಣ್ಣಿನ ಮಹತ್ವವನ್ನು ಸಾರುವ ಈ ಜಾನಪದ ಗೀತೆಗಳು ನಮ್ಮ ಸಂಸ್ಕೃತಿಯ ಒಂದು ಭಾಗವೇ ಆಗಿದೆ ಎನ್ನೋದನ್ನು ಮರೆಯುವಂತಿಲ್ಲ. ನಮ್ಮ ಸಮಾಜ ಸುಶಿಕ್ಷಿತಗೊಳ್ಳುತ್ತಾ ಹೋದಂತೆ ನಮ್ಮ ಎಷ್ಟೋ ಅನಿಷ್ಟ ಪದ್ದತಿಗಳು ಮರೆಯಾಗಿವೆ. ಎಲ್ಲೋ ಒಂದು ಕಡೆ ಕೆಲವೊಂದು ಪದ್ದತಿಗಳು ಹಾಗೆ ಉಳಿದುಕೊಂಡು ಬಿಟ್ಟಿವೆ. ಕೆಲವೊಂದು ವಿವೇಕರಹಿತ ಮನಸ್ಥಿತಿಯನ್ನು ನಾವೇಕೆ ಇನ್ನೂ ಬಿಟ್ಟಿಲ್ಲ ಅನ್ನೋದನ್ನು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕು. ಅದಕ್ಕೆ ಹಿತವಾದ ಪರಿಹಾರವನ್ನು ಕಂಡುಕೊಳ್ಳುವುದು ಇಂದು ಅತ್ಯಗತ್ಯವಾಗಿದೆ.

**– ಡಾ. ಜ್ಯೋತಿ ಸತೀಶ್**

# ಚಿಂತಕ ಗೋಪಾಲ ಬಿ. ಶೆಟ್ಟಿಯವರ ಹೊಸಕೃತಿ 'ಮಿಥ್ಯೆಯೊಳಗಿನ ಸತ್ಯ'

ಲೇಖಕ ಗೋಪಾಲ ಬಿ. ಶೆಟ್ಟಿ ಇಂದ್ರಾಳಿ ಇವರ ಸಂಪಾದಕತ್ವದಲ್ಲಿ ಅವರ ಮತ್ತು ವಿವಿಧ ಮೂಲಗಳಿಂದ ಆಯ್ದ ವೈಚಾರಿಕ ಹಾಗೂ ಇತರ ಬರಹಗಳಿಂದ ಈ ಕೃತಿ ಮೂಡಿಬಂದಿದೆ. ಸಾಕಷ್ಟು ಕನ್ನಡ ಮತ್ತು ಆಂಗ್ಲ ಕೃತಿಗಳನ್ನು ಶೆಟ್ಟಿಯವರು ಈ ಕೃತಿ ರಚಿಸುವಲ್ಲಿ ಹಿನ್ನಲೆಯಾಗಿ ಓದಿಕೊಂಡಿದ್ದಾರೆ.

ಈ ಮೊದಲು ನಾನು ಶೆಟ್ಟಿಯವರ 'ಅಂತರಂಗ ಮತ್ತು ಬಹಿರಂಗ', 'ಅನಾವರಣ' ಮೊದಲಾದ ಕೃತಿಗಳನ್ನು ಓದಿಕೊಂಡಿದ್ದೇನೆ. ಅವರು ತಮ್ಮ ಕೃತಿಗಳಲ್ಲಿ ನಾವು ಬಾಳುತ್ತಿರುವ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಅನ್ಯಾಯಗಳ, ಅಸಮತೆಗಳ ಬಗ್ಗೆ ವಿಷಾದದಿಂದ, ಅಷ್ಟೇ ದಿಟ್ಟತನದಿಂದ ಅವುಗಳ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಅವರ ಹೆಚ್ಚಿನ ಕೃತಿಗಳಂತೆ ಈ ಕೃತಿಗೂ ಮುನ್ನುಡಿಯಾಗಲಿ, ಬೆನ್ನುಡಿಯಾಗಲಿ ಇಲ್ಲದಿರುವುದು ಅವರ ತನ್ನದೇ ಆದ ನಿಲುವಿಗೆ, ಚಿಂತನೆಗೆ ಸಾಕ್ಷಿಯಾಗುತ್ತದೆ. ಈ ಕೃತಿಯೂ ಅವರೇ ಹುಟ್ಟುಹಾಕಿದ, ಅವರದೇ ಆದ ನೂತನ ಪಬ್ಲಿಕೇಶನ್‌ನಲ್ಲಿ ಪ್ರಕಟಗೊಂಡಿದೆ. ಕೃತಿಕಾರರ ವಿಭಿನ್ನ ವಿಚಾರಧಾರೆಗೆ ಒಪ್ಪುವಂತಹ ಮುಖಪುಟವನ್ನು ಸತೀಶ್ ಕಲ್ಮಾಡಿಯವರು ರಚಿಸಿದ್ದಾರೆ. ನಮ್ಮ ಸಮಾಜದಲ್ಲಿ ಹರಡಿರುವ ಮಿಥ್ಯೆಯನ್ನು ಜ್ಞಾನಜ್ಯೋತಿಯ ಮೂಲಕ ಹೊಡೆದೋಡಿಸುವ ಸ್ತುತ್ಯ ಕಾರ್ಯವನ್ನು ಲೇಖಕರಿಲ್ಲಿ ಮಾಡಿತೋರಿಸಿದ್ದಾರೆ.

ಕಥಾ ಸಂಕಲನ, ಕಾವ್ಯ ಸಂಕಲನ, ಗೀತಾ ನಾಟಕ ಅಲ್ಲದೆ, ವೈಚಾರಿಕ ಕೃತಿಗಳನ್ನು ಹೊರತಂದಿರುವ ಶೆಟ್ಟಿಯವರದು ಇದು ಹನ್ನೆರಡನೆಯ ಕೃತಿ. ಇವರ ವೈಚಾರಿಕ ಕೃತಿಗಳಲ್ಲಿ ಓರ್ವ ವಿಚಾರವಾದಿಯ ವಿಮರ್ಶಾತ್ಮಕ ದೃಷ್ಟಿಕೋನದ, ಸಮಾಜವಾದಿ ನಿಲುವಿನ ವಿಚಾರಧಾರೆಯನ್ನು ಕಾಣಬಹುದಾಗಿದೆ.

ಸದಾ ವ್ಯಾಸಂಗ ನಿರತರಾಗಿರುವ ಶೆಟ್ಟಿಯವರು ವಿಚಾರವಾದಿ ಲೇಖಕರಾಗಿ ಶೋಷಿತರ, ದಲಿತರ ಮೇಲಾಗುವ ಅನ್ಯಾಯ, ದೌರ್ಜನ್ಯದ ವಿರುದ್ಧ ದನಿಯೆತ್ತುತ್ತಾರೆ. ವಾರ್ತಾ ಭಾರತಿ ಪತ್ರಿಕೆಯ ಅಂಕಣ ಬರಹಗಾರರಾಗಿ, ಲೇಖಕರಾಗಿ ಇವರು ಪ್ರಸಿದ್ಧರು. ಮೂಢನಂಬಿಕೆ, ಡಂಭಾಚಾರವನ್ನು ಇವರು ಕಟುವಾಗಿ ವಿರೋಧಿಸುತ್ತಾ ಬಂದವರು.

ಪ್ರಸ್ತುತ ಈ ಕೃತಿಯಲ್ಲಿ ಲೇಖಕರು 36 ಅಧ್ಯಾಯಗಳಲ್ಲಿ 300 ಪುಟಗಳಲ್ಲಿ ವಿಚಾರವಾದದ ಧಾರೆಯನ್ನು ಹರಿಸಿದ್ದಾರೆ. ಇವರ ಸಂಪಾದಕತ್ವದಲ್ಲಿ ಮೂಡಿಬಂದಿರುವ ಈ ಕೃತಿಯಲ್ಲಿ ಇವರ ಲೇಖನದ ಜೊತೆಜೊತೆಗೆ ಇತರ ಪ್ರಸಿದ್ಧ ಲೇಖಕರ ಬರಹಗಳನ್ನು ಆರಿಸಿಕೊಂಡಿದ್ದಾರೆ.

ಕೃತಿಯ ಮೊದಲ ಲೇಖನವು ವಿಚಾರವಾದದ ವಿಹಂಗಮ ನೋಟ. ಈ ಲೇಖನದಲ್ಲಿ ಖ್ಯಾತ ವಿಚಾರವಾದಿ ಆರ್.ಜಿ. ಇಂಗರ್‌ಸೋಲ್ ಇಂಗ್ಲೀಷ್ ಕವಿ ಪಿ.ಬಿ. ಶೆಟ್ಲಿ, ಆಲ್ಬರ್ಟ್ ಐನ್‌ಸ್ಟೀನ್, ಭಗತ್‌ಸಿಂಗ್, ಸ್ವಾಮೀ ವಿವೇಕಾನಂದ, ರಾಷ್ಟ್ರಕವಿ ಕುವೆಂಪು, ಡಾ. ನರೇಂದ್ರ ಧಾಬೋಲ್ಕರ್ ಮೊದಲಾದ ಮಹಾಚೇತನಗಳ ಅಣಿಮುತ್ತುಗಳಿವೆ. ಇವೆಲ್ಲವೂ ಅಂಧಶ್ರದ್ಧೆ ಅಜ್ಞಾನದಿಂದ ಕೂಡಿದ ಮತಾಂಧತೆ ವಿರುದ್ಧ ಹುಟ್ಟಿಕೊಂಡಿರುವಂತಹುಗಳು.

ಎರಡನೆಯ ಲೇಖನ ಫಾಸಿಸ್ಟ್ ನರಹಂತಕರ ಗುಂಡಿಗೆ ಬಲಿಯಾದ ಖ್ಯಾತ ವಿಚಾರವಾದಿ ಡಾ. ನರೇಂದ್ರ ಧಾಬೋಲ್ಕರ್ ಅವರ ವಿಚಾರಧಾರೆ. ಅಲ್ಲದೆ, ಅವರ ಹತ್ಯೆ ಮಾಡಿದವರನ್ನು ಸರಕಾರ ಇನ್ನೂ ಸರೆಹಿಡಿಯದ ಬಗ್ಗೆ ಖೇದ ವ್ಯಕ್ತಪಡಿಸುತ್ತಾರೆ. ಈ ಲೇಖನ ಬರೆದವರು ಡಾ. ಜಿ. ಭಾಸ್ಕರ್ ಮಯ್ಯನವರು.

'ಇಂದಿರಾ ಶೈಲಿ ನೆನಪಿಸುವ ಮೋದಿ ಆಡಳಿತ' ಲೇಖನದಲ್ಲಿ ಇಂದಿರಾ ಗಾಂಧಿಯವರ ಆಡಳಿತ ಕ್ರಮ ಅಲ್ಲದೆ, ಮೋದಿ ಮತ್ತು ಇಂದಿರಾ ಇವರಿಬ್ಬರಲ್ಲೂ ಕಾಣುವ ನಿರಂಕುಶ ಸ್ವಭಾವ ಹಾಗೂ ಆರಾದನಾ ಭಾವ ಆಕಾಂಕ್ಷೆಯ ಸಾಮ್ಯತೆಯನ್ನು ಕಂಡುಕೊಂಡಿದ್ದಾರೆ. ಪ್ರಜಾವಾಣಿ ಪ್ರಕಟಿತ ಈ ಲೇಖನ ಬರೆದವರು ರಾಮಚಂದ್ರಗುಹಾ ಅವರು.

ಪ್ರಜಾವಾಣಿಯಲ್ಲಿ ಪ್ರಕಟಗೊಂಡಿರುವ ಡಾ. ಪಂಡಿತಾರಾಯರ ಗೋಹತ್ಯಾ ನಿಷೇಧ ಹಾಗೂ ಸಾವರ್ಕರ್ ಹೆಸರಿನ ಲೇಖನವೂ ಈ ಕೃತಿಯಲ್ಲಿದೆ. ಗೋ ರಕ್ಷಣೆಯ ಹುಚ್ಚುತನದಂತೆ ಧಾರ್ಮಿಕ ನಂಬಿಕೆಯ ಗೋಭಕ್ಷಣೆಯ ಕ್ರೌರ್ಯವನ್ನು ಸಾವರ್ಕರ್ ವಿರೋಧಿಸಿದ್ದಾರೆ.

ಗಣೇಶ ಅಮೀನಗಡಿ ಅವರ 'ನಾಸ್ತಿಕರನ್ನು ಹೊರಗಿಟ್ಟ ಸಾಂಸ್ಕೃತಿಕ ಜೀವನ ಬರಡು' ಲೇಖನವೂ ಈ ಕೃತಿಯಲ್ಲಿದೆ. ವಾಸ್ತು ಜ್ಯೋತಿಷ್ಯ ಇವೆಲ್ಲ ನಮ್ಮ ಸಂಪ್ರದಾಯಗಳು. ಇವು ಸಂಪ್ರದಾಯಗಳಾಗಿ ಬೆಳೆದುಬಂದ ಬಗ್ಗೆ ಅಭ್ಯಾಸ ಮಾಡಬಹುದಾಗಿದೆಯಾದರೂ ವಿಜ್ಞಾನವೆಂದು ಕಲಿಸುವುದು ಸರಿಯಲ್ಲವೆಂದು ಅವರು ಚರ್ಚಿಸುತ್ತಾರೆ.

ಕೃತಿಯ ಸಂಪಾದಕ ಗೋಪಾಲ ಬಿ. ಶೆಟ್ಟಿಯವರ 'ಇದಕ್ಕೆ ಅವರು ಸಿದ್ಧರಿದ್ದಾರೆಯೇ?' ಎಂಬ ಲೇಖಲನವೂ ಈ ಕೃತಿಯಲ್ಲಿದೆ. ವಿ.ಕೆ. ರಾಮಾನುಜನ್ ಅವರು ಬರೆದಿರುವ ಇಂಗ್ಲಿಷ್ ಪ್ರಬಂಧ 'ಶ್ರೀ ಹಂಡ್ರೆಡ್ ರಾಮಾಯಣಮ್' ಬಗ್ಗೆ ನಡೆದ ಚರ್ಚೆಯೂ ಇಲ್ಲಿ ಬಂದಿದೆ.

ಮಡೆಸ್ನಾನ ಮತ್ತು ಪಂಕ್ತಿಭೇದ ಅವರದ್ದೇ ಆದ ಇನ್ನೊಂದು ವಿಚಾರಪೂರ್ಣ ಲೇಖನ.

ವಾರ್ತಾಭಾರತಿ ವಾಚಕರ ವಾಣಿಗೆ ಒಂದು ಪತ್ರ 'ಈ ಆಷಾಢಭೂತಿತನಕ್ಕೆ ಕೊನೆ ಎಂದು' ಲೇಖನದಲ್ಲಿ ಶೆಟ್ಟಿಯವರು ಸಂಪಾದಕೀಯ ಲೇಖನಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

ಪ್ರಸ್ತುತ ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ 'ಸ್ವಾತಂತ್ರ್ಯ ಪರಿಕಲ್ಪನೆ ನಾನು ಕಂಡಂತೆ' ಲೇಖನದಲ್ಲಿ ಶೆಟ್ಟಿಯವರು ಸ್ವಾತಂತ್ರ್ಯ ಪರಿಕಲ್ಪನೆಯ ಬಗ್ಗೆ ಅತ್ಯಂತ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಲೇಖನ ಓದಿಸಿಕೊಂಡುಹೋಗುತ್ತದೆ.

ವಾರ್ತಾ ಭಾರತಿ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಈ ಕೃತಿಯಲ್ಲಿ ಪ್ರಕಟವಾಗಿರುವ ಅವರ ಮತ್ತೊಂದು ಲೇಖನ 'ಕಮಲಾದಾಸ್‌ಗೆ ಕೊನೆಯ ನಮನ' ಬಹುಮುಖ ಪ್ರತಿಭೆಯ ಬರಹಗಾರ್ತಿಯಾಗಿರುವ ಇವರು ಮಲಯಾಳಂ ಮತ್ತು ಇಂಗ್ಲಿಷ್‌ನಲ್ಲಿ ಬರೆದು ಜನಮನ ಸೂರೆಗೊಂಡ ಕಮಲಾದಾಸ್ ಕಮಲಾ ಸೂರೈಯಾ ಅವರ ಸಿದ್ಧಿಸಾಧನೆಯ ಚಿತ್ರಣ ಇಲ್ಲಿದೆ.

ಬಸವಣ್ಣನವರ ವಚನಗಳಲ್ಲಿ ವೈಚಾರಿಕ ನಿಲುವು ಗೋಪಾಲ ಬಿ. ಶೆಟ್ಟಿಯವರ ಇನ್ನೊಂದು ಲೇಖನ.

'ಆ ಸತ್ಯ ಹರಿಶ್ಚಂದ್ರ' ಗೌರೀಶ ಕಾಯ್ಕಿಣಿಯವರು ಕಸ್ತೂರಿಯಲ್ಲಿ ಬರೆದಿರುವ ಲೇಖನ. ಈ ಲೇಖನ ಸತ್ಯ ಹರಿಶ್ಚಂದ್ರನ ಇನ್ನೊಂದು ಮುಖವನ್ನು ನಮ್ಮೆದುರು ತಂದು ನಿಲ್ಲಿಸುತ್ತದೆ.

ಹೊಸತು ಪತ್ರಿಕೆಯಲ್ಲಿ ಬಂದಿರುವ ಜಿ. ರಾಮಕೃಷ್ಣ ಅವರ ಋಗ್ವೇದ ಪ್ರವೇಶಿಕೆ ಐತಿಹ್ಯ ಮತ್ತು ವಾಸ್ತವದಲ್ಲಿ ಋಗ್ವೇದ ಕಾಲದ ಧರ್ಮಶಾಸ್ತ್ರ ಪ್ರಶ್ನೋತ್ತರಗಳ ಚರ್ಚೆಯೂ ಇಲ್ಲಿ ಮೂಡಿಬಂದಿದೆ.

'ಎದ್ದೇಳು ಕೃಷ್ಣ' ಶೆಟ್ಟಿಯವರ 'ಕತ್ತಲು ಕವಿದಾಗ' ಕವನ ಸಂಕಲನದಿಂದ ಆಯ್ದ ಒಂದು ಕವನ. ಸ್ವರ್ಣ ರಥದಲ್ಲಿ ಕುಳಿತುಕೊಂಡು ಬರುವ ವಜ್ರಕಿರೀಟಧಾರಿ ಕೃಷ್ಣನನ್ನು ದರುಶನ ನೀಡೆಂದು ಕವಿ ಕೇಳಿಕೊಳ್ಳುತ್ತಾರೆ.

ಡಾ. ಬಾಬಾ ಅಂಬೇಡ್ಕರ್ ಅವರ ಸಮಗ್ರ ಬರಹಗಳ ಮತ್ತು ಭಾಷಣಗಳ ಸಂಪುಟದಿಂದ ಆಯ್ದ ಕೃಷ್ಣಾವಸಾನದ ಕಥೆಯೂ ಈ ಸಂಕಲನದಲ್ಲಿದೆ.

✍ ಡಾ. ಕರುಣಾಕರ್ ಎಸ್. ಶೆಟ್ಟಿ, ಪಣಿಯೂರ್

ವಾರ್ತಾಭಾರತಿಯಲ್ಲಿ ಪ್ರಕಟಿತ ಗುಜರಾತ್ ಸರಕಾರದ ನಿವೃತ್ತ ದಿ. ಜಿ.ಪಿ.ಆರ್. ಬಿ. ಶ್ರೀಕುಮಾರ್ ಮಲಯಾಳಂದಲ್ಲಿ ಬರೆದ ಕೃತಿಯನ್ನು ಡಾ. ಸಾರಾ ಅಬೂಬಕ್ಕರ್ 'ಧರ್ಮ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕೃತಿ ಮತ್ತು ಅದು ಮೂಡಿಬಂದ ಹಿನ್ನೆಲೆಯನ್ನು ಶೆಟ್ಟಿಯವರಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

"ಋಷಿ-ಖುಷಿ" ಲೇಖನದಲ್ಲಿ ನಮ್ಮ ಪೂರ್ವಜರು ಉಚ್ಚ ಕುಲದಲ್ಲಿ ಹುಟ್ಟಿ ಬಂದವರೆಂದು ನಾವು ತಿಳಿದರೆ ಅದು ತಪ್ಪು ಕಲ್ಪನೆ. ಆ ಹಿರಿಯರ ಮೂಲವನ್ನು ಕೆದಕಿದರೆ ಮಿಥ್ಯೆಯೊಳಗಿನ ಸತ್ಯ ತಿಳಿದುಬರುತ್ತದೆ ಎಂದು ಬರೆಯುತ್ತಾರೆ. ಬಹುಶಃ ಈ ಕೃತಿಗೂ ಅವರಿಗೆ ಇಲ್ಲಿಂದಲೇ ಹೆಸರು ಹೊಳೆದಿರಬೇಕು. ಈ ಲೇಖನವನ್ನು ಬರೆದವರು ಪ್ರೊ. ಬಿವಿ. ವೀರಭದ್ರಪ್ಪ. ಪ್ರಜಾವಾಣಿಯಲ್ಲಿ ಈ ಲೇಖನ ಪ್ರಕಟವಾಗಿತ್ತು.

ಜನಾಂಗೀಯ ರಾಜಕಾರಣದ ಹರಿಕಾರ ಬಾಳ ಠಾಕ್ರೆ ಮೂಲ ಇಂಗ್ಲಿಷಿನ ಖ್ಯಾತ ಪತ್ರಕರ್ತೆ ಮೀನಾ ಮೆನನ್ ಬರೆದಿರುವ ಲೇಖನದ ಆಯ್ದ ಭಾಗಗಳ ಸರಳಾನುವಾದ. ಅದನ್ನು ಅಚ್ಚುಕಟ್ಟಾಗಿ ಶೆಟ್ಟಿಯವರು ಮಾಡಿದ್ದಾರೆ.

ವಾರ್ತಾಭಾರತಿ ಪತ್ರಿಕೆಯಲ್ಲಿ ಶಿವಸುಂದರ ಅವರ ಮಸೀದಿಯಲ್ಲಿಲ್ಲದ ರಾಮ ರಾಮಮಂದಿರದಲ್ಲಿ ಇರುವುದಿಲ್ಲ ಲೇಖನದಲ್ಲಿ ಜನರ ಮುಗ್ಧ ಧಾರ್ಮಿಕ ನಂಬಿಕೆಗಳನ್ನು ಬಳಸಿಕೊಂಡು ದ್ವೇಷದ ರಾಜಕಾರಣ ಮಾಡಿ ಮತ್ತೆ ಸಮಾಜವನ್ನು ಹಿಡಿತಕ್ಕೆ ತೆಗೆದುಕೊಳ್ಳುವ ರಾಜಕಾರಣಿಗಳ ಷಡ್ಯಂತ್ರದ ಬಗ್ಗೆ ತಿಳಿಸುತ್ತಾರೆ.

ಪ್ರೊ. ಕೆ.ಎಸ್. ಭಗವಾನ್ ಅವರ ಆಹಾರ ಮತಾಚಾರ ಲೇಖನ ಮಾನವ ತನ್ನಿವ ಆಹಾರದ ಬಗ್ಗೆ ಚರ್ಚೆ ನಡೆಸಿದೆ.

ಪ್ರಜಾವಾಣಿ ಪ್ರಕಟಿತ ಡಾ. ಸಿ.ಎಸ್. ದ್ವಾರಕನಾಥ್ ಅವರ ಉಡುಪಿ ಶ್ರೀ ಕೃಷ್ಣ ದೇವಸ್ಥಾನ ಯಾರಿಗೆ ಸೇರಿದ್ದು ಲೇಖನ ಈ ದೇವಸ್ಥಾನ ಯಾರಿಗೆ ಸೇರಿದೆಯೆಂಬ ವಿಷಯ ಮೇಲೆ ಬೆಳಕು ಬೀರಿದೆ.

ಪ್ರೊ. ಚಂದ್ರಶೇಖರ ಪಾಟೀಲ ಅವರ ವಾರ್ತಾಭಾರತಿಯಲ್ಲಿ ಪ್ರಕಟಿತ ಗಾಂಧೀವಾದ ಮತ್ತು ಗಾಂಧಿಗಳು ತನ್ನೆಲ್ಲ ವೈರುಧ್ಯಗಳ ಮಹಾತ್ಮಾ ಗಾಂಧಿ - ಮೋಹನದಾಸ್ ಕರಮಚಂದ ಗಾಂಧಿ ಒಬ್ಬ ಮಾನವನಾಗಿದ್ದ ಎನ್ನುವ ಸತ್ಯವನ್ನು ಬಿಚ್ಚಿತೋರಿಸುವ ಲೇಖನ.

ಈತ ಶ್ರೀ ಸತ್ಯನಾರಾಯಣ ಲೇಖನ ಭಾರತಿ ಹಾವನೂರ ಅವರ ಪ್ರಜಾವಾಣಿಯಲ್ಲಿ ಪ್ರಕಟಿತ ಲೇಖನ. ಇಂದು ಜನರು ಅತ್ಯಂತ ಭಕ್ತಿಭಾವದಿಂದ ಮಾಡುವ ಶ್ರೀ ಸತ್ಯನಾರಾಯಣ ಪೂಜೆ ಹೇಗೆ, ಯಾವಾಗ ಹುಟ್ಟಿಕೊಂಡಿತೆಂಬ ಹಿನ್ನಲೆಯನ್ನು ತೆರೆದಿಡುವ ಲೇಖನ.

ಗೋಹತ್ಯೆ ಸುಪ್ರೀಂಕೋರ್ಟ್ ಮತ್ತು ಸಂವಿಧಾನ ಶಿವಸುಂದರ ಅವರ ಪ್ರಸ್ತುತ ಪಾಕ್ಷಿಕದಲ್ಲಿ ಪ್ರಕಟಿತ ಲೇಖನ ಇಲ್ಲಿ ಗೋಹತ್ಯೆಯ ಬಗ್ಗೆ ನಡೆದಿರುವ ಚರ್ಚೆ ಗಮನಾರ್ಹವಾಗಿದೆ.

ಪ್ರೊ. ಜಿ.ಎಚ್. ನಾಯಕ್ ಅವರ ಪ್ರಜಾವಾಣಿಯಲ್ಲಿ ಪ್ರಕಟಿತ 'ನಾವು ಕಾಣದ ರಾಧಾಕೃಷ್ಣನ್ ಮುಖ' ಲೇಖನದಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ 5/09/1888 ಅಲ್ಲಿ ಅದು 02/09/1887 ಎಂದು ಅವರ ಮಗ ಡಾ. ಸರ್ವಪಲ್ಲಿ ಗೋಪಾಲ ಅವರು ಬರೆದಿರುವುದನ್ನು ಉಲ್ಲೇಖಿಸುತ್ತ, ನಾವು ಶಿಕ್ಷಕರ ದಿನವನ್ನು 5 ರಂದೇ ಮುಂದುವರಿಸುವುದು ಸರಿಯೆ? ಎಂದು ಪ್ರಶ್ನೆ ಎಸೆಯುತ್ತಾರೆ.

ಪ್ರಜಾವಾಣಿ ಪ್ರಕಟಿತ ರಾಮಚಂದ್ರ ಗುಹಾ ಅವರ ಧಾರ್ಮಿಕ ನಂಬಿಕೆ ದಿವ್ಯಾನುಭೂತಿ, ಪೈಶಾಚಿಕತೆ ಈ ಲೇಖನ ಧಾರ್ಮಿಕ ನಂಬಿಕೆ ಜ್ಯೋತಿಷ್ಯದ ಮೇಲೆ ಬೆಳಕು ಬೀರುತ್ತದೆ.

ಹಿಂದೂ ಧರ್ಮ ಶಾಸ್ತ್ರದ ಒಗಟುಗಳು ವಾರ್ತಾಭಾರತಿಯ ಪ್ರಕಟಗೊಂಡಿರುವ ಶೆಟ್ಟಿಯವರ ಬೇರೆ ಬೇರೆ ಲೇಖನಗಳು. ಇಲ್ಲಿ ಅವರು ವಿವಿಧ ಸಂಹಿತೆಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

ಮಂಗಳವಾರವನ್ನು ಅಮಂಗಳ ಎಂದವರಾರು ಲೇಖನವು ಪ್ರವೀಣ್ ಎಸ್. ಶೆಟ್ಟಿ ಮಂಗಳೂರು ಇವರು ಪತ್ರಪುಷ್ಪಕ್ಕೆಂದು ಬರೆದಿರುವ ವಿಚಾರಾತ್ಮಕ ಲೇಖನ.

ಪದ್ಮರಾಜ ದಂಡಾವತಿ ಅವರು ಪ್ರಜಾವಾಣಿಗಾಗಿ ಬರೆದಿರುವ ಈ ಲೇಖನದಲ್ಲಿ ಜಯಲಲಿತಾ ಮತ್ತು ತಮಿಳುನಾಡಿನ ರಾಜಕೀಯ ವಿಢಂಬನೆಯ ಚಿತ್ರಣವಿದೆ.

ಜ್ಯೋತಿಷ್ಯ ಕೇವಲ ಬಂಕಮ್ ಎ.ಎಸ್. ನಟರಾಜ್ ಅವರು ಬರೆದಿರುವ ಜ್ಯೋತಿಷ್ಯಕ್ಕೆ ಸವಾಲು ಕೃತಿಯಿಂದ ತೆಗೆದುಕೊಳ್ಳಲಾಗಿದೆ.

ವಾಸ್ತು ಎಷ್ಟು ವಾಸ್ತವ ಪ್ರೊ. ಬಿ.ವಿ. ವೀರಭದ್ರಪ್ಪ ಇವರು ಬರೆದಿರುವ ವೈಚಾರಿಕ ಒಳನೋಟದ ಅಪರೂಪದ ಕೃತಿಯ ಸ್ಥೂಲ ಪರಿಚಯಾತ್ಮಕ ಲೇಖನವಾಗಿದೆ.

ವಿಚಾರವಾದದ ಬಗ್ಗೆ ಒಂದಿಷ್ಟು ರಂತಿದೇವನ ಯಜ್ಞ ಶಾಲೆಯಲ್ಲಿ, ಸತ್ಯಪೀಠ ಸತ್ಯನಾರಾಯಣನಾದ ಕಥೆ ಭಗವದ್ಗೀತೆ ಒಂದು ಅದ್ಭುತ ಪ್ರಕ್ಷೇಪ ಇವು ಈ ಕೃತಿಯ ಸಂಪಾದಕರಾದ ಗೋಪಾಲ ಬಿ. ಶೆಟ್ಟಿಯವರ ಲೇಖನಗಳು.

ಸತ್ಯದ ಪ್ರಭೆಯನ್ನು ಮಿಥ್ಯೆಯ ಅವಕುಂಠನದಿಂದ ಅನವರತ ಅದುಮಿ ಹಿಡಿಯುವುದು ಅಸಾಧ್ಯ. ಕಾಗದದ ಹೂವಿನಲ್ಲಿ ಕಮನೀಯ ಕಂಪು ಹೊರಸೂಸುವುದು ಕೂಡಾ ಅಷ್ಟೇ ಅಸಾಧ್ಯವೆಂದು ಕೃತಿಯ ಕೊನೆಯಲ್ಲಿ ಹೇಳಿರುವ ಶೆಟ್ಟಿಯವರ ಎಲ್ಲ ವೈಚಾರಿಕ ಕೃತಿಗಳಂತೆ ಈ ಕೃತಿಯಲ್ಲಿ ಬರುವ ಅವರ ಮತ್ತು ಇತರ ಲೇಖಕರ ಲೇಖನಗಳು ನಮ್ಮ ದೇಶದ ರಾಜಕೀಯ, ಧಾರ್ಮಿಕ ಅವ್ಯವಸ್ಥೆ, ಸಾಮಾಜಿಕ ಅನ್ಯಾಯಗಳ ಮೇಲೆ ಕ್ಷಕಿರಣ ಬೀರಿವೆ. ನಿಜವಾಗಿಯೂ ಯಾವ ಧರ್ಮವೂ ಕೆಟ್ಟದ್ದನ್ನು ಭೋದಿಸುವುದಿಲ್ಲ. ಆದರೆ, ಅದಕ್ಕೆ ನಂತರದ ದಿನಗಳಲ್ಲಿ ರೆಕ್ಕೆಪುಕ್ಕಗಳನ್ನು ಅನುಯಾಯಿಗಳು ಸಾಗಿಸುತ್ತಾರೆ. ಎಲ್ಲ ಧರ್ಮದಲ್ಲೂ ತನ್ನ ಇತಿಮಿತಿ, ವಿಧಿ ನಿಷೇದ ಇದ್ದೇ ಇರುತ್ತದೆ. ಒಳ್ಳೆಯದು ಇದ್ದಲ್ಲಿ ಕೆಟ್ಟದ್ದು ಇರಬೇಕಾದ್ದೇ. ಇಲ್ಲದಿದ್ದರೆ ಒಳ್ಳೆಯದರ ಬೆಲೆ ಅರಿವಾಗುದಾದರೂ ಹೇಗೆ? ನಾವು ನೇರ ಮಾರ್ಗದಲ್ಲಿ ನಡೆದು ಇತರರಿಗೆ ದಾರಿದೀಪದ ಕಾರ್ಯವೆಸಗಬಹುದು. ಅನ್ಯಾಯ ನಡೆದಾಗ ಪ್ರತಿಭಟಿಸಬೇಕೇ ಹೊರತು ಎಲ್ಲವೂ ತಪ್ಪೆನ್ನಲಾಗದು. ನಾವು ಪ್ರಾಮಾಣಿಕರಾಗಿ ಬದುಕುತ್ತಾ ಇತರರಿಗೆ ಮಾದರಿಯಾಗೋಣ. ಈ ಕೃತಿಯನ್ನು ಹೊರತಂದಿರುವ ಲೇಖಕರಿಗೆ ಮತ್ತೊಮ್ಮೆ ಮಗದೊಮ್ಮೆ ಅಭಿನಂದನೆಗಳು.


## MATRIMONIAL

ALLIANCE INVITED FOR A SMARTHA KANNADA BRAHMIN GIRL, $5^{th}$ July 1990 Born, 5.5" Kaushika Gotra, Jyeshta Nakshatra – $2^{nd}$ Pada, Vrischik Rashi, B.Com, C.A., working in a C.A. Firm in Mumbai. From Professionally qualified, well employed Brahmin Boy Please contact: (M) 9833212752 / 28950511

***

Wanted Kannada speaking Brahmin Boy, working abroad, Girl Age: 24 yrs (1991 Born). Education: B.Tech, M.B.A., Height 5.4" Slim, Fair Good looking. Gotra : Bharadwaja Star: Chitta (Father Defence Officer).

Email : ramavi18b@gmail.com

Tel: 944542814 / 9867244123

# ಶತಮಾನೋತ್ಸವದ ಅವಿಸ್ಮರಣೀಯ ಕ್ಷಣಗಳು



✍ ಶ್ರೀಮತಿ ಲತಾ ರವೀಂದ್ರ

ಶತಮಾನೋತ್ಸವ ಎಂದ ಕೂಡಲೇ ಎಲ್ಲರಿಗೂ ಯಾವುದೋ ಮಹಾನ್ ವ್ಯಕ್ತಿಯ, ಯಾವುದೋ ಸ್ವಾಮೀಜಿಯ, ಯಾರೋ ದೇಶದ ನಾಯಕರ ಅಥವಾ ಯಾವುದಾದರೂ ಸ್ಮಾರಕದ ಆಚರಣೆ ಇರಬಹುದೇನೋ ಎಂದು ಅನ್ನಿಸುವುದು ಸಹಜ. ನನ್ನ ಆತ್ಮೀಯ ಗೆಳತಿ, ಆದರ್ಶ ನಾರಿ, ಆರಾಧನೆಯ ಸ್ವರೂಪವಾದ ಲತಾಳ ಅಭಿಮಾನಪೂರಕ ಆಮಂತ್ರಣ ಸಿಕ್ಕಾಗ ನಾನೂ ಅದೇ ರೀತಿ ಭಾವಿಸಿ, ಅವಳ ಕಾಲೇಜಿನ founderನ 'Centenory celebration' ಇರಬಹುದು ಎಂದು ಲೆಕ್ಕಹಾಕಿದ್ದೆ. ಆದರೆ, ಅವಳ ಭಾವಚಿತ್ರ ಸಮೇತ ಉತ್ತರ ಸಿಕ್ಕಾಗ ನನ್ನ ಎಲ್ಲಾ ಲೆಕ್ಕಾಚಾರಗಳೂ ತಲೆಕೆಳಗಾದವು. ವಿಸ್ಮಯದಿಂದ ಮೂಗಿನ ಮೇಲೆ ಬೆರಳಿಡುವಂತೆ ಆಯಿತು.

ನವರತ್ನಗಳನ್ನು ಹಡೆದ, ಅವಳ ಮಾತೃಸ್ವರೂಪರಾದ ಅತ್ತೆಯ ಶತಮಾನೋತ್ಸವದ ಸಮಾರಂಭಕ್ಕೆ ನಮಗೆ ಸ್ವಾಗತ ಕೋರಿದ್ದಳು. mother-in-law ಜೊತೆ ಬರೇ Law points ಹಾಕಿ ವಾದ ಮಾಡುವ ಸೊಸೆಯರ ಬಗ್ಗೆ ಅವಿರತವಾಗಿ ಟಿವಿ, ಸಿನಿಮಾಗಳಲ್ಲಿ ನೋಡಿ ನೋಡಿ ಸುಸ್ತಾಗಿದ್ದ ನನಗೆ ಇದೊಂದು ಹೊಸ ಅನುಭವ ಪಡೆಯುವ ಬಯಕೆ ತಲೆದೋರಿತು.

14/08/2016 ಬೆಳಿಗ್ಗೆ ಸುಮಾರು 11.45 ಗಂಟೆಗೆ ನನ್ನ ಗೆಳತಿಯ ಮನೆಯ ಮುಂದೆ ಆಟೋ ಇಳಿದಾಗ ಅವಳ ಮೈದುನ ಶಂಕರ್ ಅವರ ಮಗಳ ನಗೆಯ ಅಭಿಮಾನಪೂರಕ ಸ್ವಾಗತ ದೊರೆಯಿತು. ಒಳಗೆ ಕಾಲಿಡುತ್ತಿದ್ದಂತೆಯೇ ನನ್ನ ಪರಿಚಿತ ಮುಖಗಳೆಲ್ಲ ಒಂದರ ಹಿಂದೆ ಒಂದು ಕಂಡು ನೆನಪುಗಳ ಬುತ್ತಿ ಬಿಚ್ಚತೊಡಗಿತು. ಅಲ್ಲಿಯ ಹಾಲ್‌ನಲ್ಲಿ ಅವರ ಅತ್ತೆಯ ಮುಗುಳುನಗೆಯ ಭಾವಚಿತ್ರ ಯಾವ 'ಮೋನಾಲೀಸಾ'ಗೂ ಕಡಿಮೆಯಿಲ್ಲದ ರೀತಿ ರಾರಾಜಿಸುತ್ತಿತ್ತು. ಒಂದು ಕಡೆ ಮೇಜಿನ ಮೇಲೆ ರಂಗು ರಂಗಿನ ಅಲಂಕೃತ ಪಾಕೆಟ್‌ಗಳನ್ನು ವ್ಯವಸ್ಥಿತವಾಗಿ ಜೋಡಿಸಿದ್ದರೆ, ಇನ್ನೊಂದು ಕಡೆ ಟಿಪಾಯಿ ಮೇಲೆ ಯಾವ ಮ್ಯೂಸಿಯಂಗೂ ಕಡಿಮೆಯಿಲ್ಲದ ರೀತಿಯಲ್ಲಿ ಅವರು ಉಪಯೋಗಿಸುತ್ತಿದ್ದ ವಸ್ತುಗಳನ್ನು ಬಹಳ ಅಕ್ಕರೆಯಿಂದ ಜೋಪಾನವಾಗಿ ಕಾಪಾಡಿ ಒದಕ್ಕೆ ಒಳ್ಳೆ ಅಲಂಕೃತ ಹಿನ್ನಲೆಯನ್ನು ಒದಗಿಸಲಾಗಿತ್ತು. ಈ ಸಂದರ್ಭಕ್ಕಾಗಿಯೇ ಎಲ್ಲಾ ಮಕ್ಕಳೂ ಅವರವರ ಬಳಿಯಿದ್ದ ತಾಯಿಯ ವಸ್ತುಗಳನ್ನು ತಂದು ಒಟ್ಟಿಗೆ ಇಲ್ಲಿ ಜೋಡಿಸಿದ್ದರು. ಅವರು ಉಡುತ್ತಿದ್ದ ಸೀರೆ, ಓದುತ್ತಿದ್ದ ದೇವರ ಪುಸ್ತಕ, ಅವರು ಬರೆದ ಹಾಡಿನ ಪುಸ್ತಕ, ಧರಿಸುತ್ತಿದ್ದ ಬೆಂಡೋಲೆ, ಮುತ್ತೈದೆ ಲಕ್ಷಣವಾದ ಕರಿಮಣಿ, ತಾಳಿ, ಓದಲು ಉಪಯೋಗಿಸುತ್ತಿದ್ದ ಕನ್ನಡಕ, ಅವರ ಅಚ್ಚುಮೆಚ್ಚಿನ ಆರಾಧ್ಯಮೂರ್ತಿ 'ಶ್ರೀ ಕೃಷ್ಣ'..... ಒಂದೇ ಎರಡೆ. ಇಂತಹ ವಸ್ತುಗಳನ್ನು ಮಹಾರಾಜರ ಅರಮನೆಯಲ್ಲಿ, ಪ್ರಾಚೀನ ವಸ್ತು ಸಂಗ್ರಹಾಲಯಗಳಲ್ಲಿ ಮಾತ್ರ ನೋಡಿದ್ದ ನನಗೆ ಸೊಸೆಯಿಂದ ಅತ್ತೆಗೆ ಸಲ್ಲಿಸುವ ಭಾವಪೂರ್ಣ ಶತಮಾನೋತ್ಸವದ ಸಮಾರಂಭದಲ್ಲಿ ಇವೆಲ್ಲ ನೋಡಿ ಪರಮಾಶ್ಚರ್ಯವಾಯಿತು.

ಎಲ್ಲಾ ಮಕ್ಕಳೂ ಆಗಮಿಸಿದ ಅನಂತರ 'ಗಣಪತಿಯ ಸ್ತುತಿ'ಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ಆ ಹಾಡು ಕೂಡ ಅವರ ಅತ್ತೆಯು ಹಾಡುತ್ತಿದ್ದ ಹಾಡನ್ನೇ ಪ್ರೀತಿಯ ಕೊನೆಯ ಮಗನಿಂದ ರೆಕಾರ್ಡ್ ಮಾಡಿ ಹಾಕಿದ್ದರು. ಎಲ್ಲಾ ಮಕ್ಕಳೂ ದೀಪ ಬೆಳಗುವುದರೊಂದಿಗೆ ಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಿದರು. ಅವರ ಅಚ್ಚುಮೆಚ್ಚಿನ ಕೊನೆಯ ಸೊಸೆ (ನನ್ನ ರೋಲ್ ಮಾಡೆಲ್) ಕಾರ್ಯಕ್ರಮದ ರುವಾರಿಯಾಗಿದ್ದಳು. ಯಾರಿಗೂ ತಾರತಮ್ಯವಾಗದ ರೀತಿ, ಇಬ್ಬಿಬ್ಬರು ಮಕ್ಕಳಿಂದ ಒಂದೊಂದು ನೆನಪಿನ ಸುರುಳಿ ಬಿಡುಗಡೆ ಮಾಡಿಸುವ ಯೋಜನೆ ಹಾಕಿದ್ದರು. ಇಬ್ಬರು ಪುತ್ರರು ಅವರ ಸವಿನೆನಪಿನ ಭಾವಚಿತ್ರಗಳ ಸಂಕಲನ ಬಿಡುಗಡೆ ಮಾಡಿ ಅವರ ಮನಸ್ಸಿನ ಮಾತುಗಳನ್ನು ಬಿಚ್ಚಿಟ್ಟರು. ತರುವಾಯ ಇಬ್ಬರು ಪುತ್ರರು ಮಧ್ಯ ಅವರ ಜೀವನ ಸಂಗಾತಿಗಳೊಂದಿಗೆ ಇರುವ ಭಾವಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿದರು. ಅವರೂ ಅವರ ಅಮ್ಮನ ಒಡನಾಟದ ಬಗ್ಗೆ ನೆನಪಿಸಿಕೊಂಡರು. ಇನ್ನಿಬ್ಬರು ಮಕ್ಕಳು ಆ ಮಹಾತಾಯಿಯ ಭಾವಚಿತ್ರದಿಂದ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದಾಗ ನನ್ನ ಮೈ ರೋಮಾಂಚನಗೊಂಡು ಪುಳಕಿತವಾಯಿತು. ನಾನು ಕಂಡಂತೆ, ಕೇಳಿದಂತೆ ಎಂತೆಂತ ಮಹಾನ್ ವ್ಯಕ್ತಿಗಳಿಗೆ ಮಾತ್ರ ಅಂಚೆ ಚೀಟಿಯಲ್ಲಿ ಬರುವ ಭಾಗ್ಯ ಒದಗುವುದು!. ಅನಂತರ ಅವರ ಪ್ರೀತಿಯ ಮಗಳಿಂದ ಅವರು ಹಾಡಿದ್ದ ದೇವರ ಹಾಡುಗಳ ಧ್ವನಿಸುರುಳಿಯ CD ಬಿಡುಗಡೆಯಾಯಿತು.

ನನ್ನ ವಿಸ್ಮಯ ಇಲ್ಲಿಯೇ ಕೊನೆಯಾಗಲಿಲ್ಲ. ನನ್ನ ಗೆಳತಿ ಅವರ ಮೊಮ್ಮಕ್ಕಳಲ್ಲಿ, ಮರಿಮಕ್ಕಳಲ್ಲಿ ಪ್ರತಿಭಾವಂತರಿಗೆ ಅತ್ತೆಯ ಹೆಸರಿನಲ್ಲಿ ಅವರ ಭಾವಚಿತ್ರದ ಸ್ಮರಣಿಕೆ ಮತ್ತು ಆಶೀರ್ವಾದ ಪೂರಕ ಲಕೋಟೆಯನ್ನು ಇತ್ತು ಗೌರವಿಸಿದರು. ಅದನ್ನು ಹಿರಿಯರು, ಸೀತಮ್ಮನವರ ಆತ್ಮೀಯರೂ, ನನ್ನ ಗೆಳತಿಯ ತಾಯಿಯೂ ಆದ ಶ್ರೀಮತಿ ಪದ್ಮಾವತಿಯವರು ತುಂಬು ಹೃದಯದಿಂದ ಆಶೀರ್ವದಿಸಿ ಪ್ರತಿಭಾವಂತ ಮಕ್ಕಳಿಗೆ ನೀಡಿದ್ದು ನೋಡಲು ಎರಡು ಕಣ್ಣು ಸಾಲದಂತಿತ್ತು. ಇದರ ಜೊತೆ ವಿದೇಶದಲ್ಲಿ ತನ್ನ ಕ್ಷೇತ್ರದಲ್ಲಿ ಅತ್ಯುನ್ನತ ಪ್ರಶಸ್ತಿ ಗಳಿಸಿ ಪುರಸ್ಕೃತಗೊಂಡು, ಹೆಸರಾಂತ ವೈದ್ಯನೆಂದು ಹೆಸರು ಪಡೆದಿರುವ ನನ್ನ ಗೆಳತಿಯ ತಮ್ಮ ಡಾ. ನರಸಿಂಹ ಸಹ ಆ ಮಕ್ಕಳಿಗೆ ತನ್ನ ಕಡೆಯಿಂದ ಪುರಸ್ಕಾರ ನೀಡಿದರು.

ಇದಾದ ನಂತರ ಅವರ ಸೊಸೆಯು ಮಾತನಾಡಿ, ಅತ್ತೆಯವರ ಗುಣಗಾನ ಮಾಡಿದರು. ತಾನು 18ನೆಯ ವಯಸ್ಸಿನಲ್ಲಿ ತುಂಬು ಕುಟುಂಬದ ಆ ಮನೆಗೆ ಆತಂಕ, ಭಯದಿಂದ ಕಾಲಿಟ್ಟು ಸೀತಮ್ಮನವರಿಗೆ 'ಅತ್ತೆ' ಪಟ್ಟ ಮೊದಲ ಬಾರಿಗೆ ಸಿಕ್ಕಾಗ, ಹೇಗೆ ಎಲ್ಲ ಮೈದುನ ನಾದಿನಿಯರ ಪ್ರೀತಿ ಆದರದ ಒಡನಾಟದಿಂದ ಕೆಲವೇ ದಿನಗಳಲ್ಲಿ ಅವರ ಹೆದರಿಕೆ ಮಂಗಮಾಯವಾಯಿತು ಎಂದು ವಿವರಿಸಿದರು. ಕುಟುಂಬ ಸದಸ್ಯರ ಅನಾರೋಗ್ಯದ ಸಂದರ್ಭದಲ್ಲಿ ಹೇಗೆ ಆ ತಾಯಿ ಮುನ್ನುಗ್ಗಿ ಎಲ್ಲರಿಗೂ ನೆರವಾಗುತ್ತಿದ್ದರು ಎಂದು ಎಲ್ಲರೂ ನೆನಪು ಮಾಡಿಕೊಂಡರು.

ಮೊಮ್ಮಗನಿಂದ ಸುಶ್ರಾವ್ಯವಾದ ಕೊಳಲುವಾದನ, ಮಗಳಿಂದ 'ಮಗ' ಎಂಬ ಶೀರ್ಷಿಕೆಯಲ್ಲಿ ಅವಳ ಅಣ್ಣಂದಿರ ಹೋಲಿಕೆ, ಬೀಗಿತ್ತಿಯಿಂದ ಸೀತಮ್ಮನವರ ಬಗ್ಗೆ ನಾಲ್ಕು ಸಾಲಿನ ಭಾವಪೂರ್ಣವಾದ, ಅರ್ಥವತ್ತಾದ ಸ್ಮರಣೆ.. ಎಲ್ಲಾ ಒಂದಕ್ಕಿಂತ ಒಂದು ಸಭೆಗೆ ಕಳೆಕೊಟ್ಟಿತ್ತು.

ಇದೆಲ್ಲವನ್ನೂ ಕಣ್ತುಂಬಿಕೊಂಡು, ನನ್ನ ಮನಸ್ಸಿಗೆ ತೋರಿದ ಎರಡು ಮಾತನ್ನು ನಾನೂ ಸಭೆಯಲ್ಲಿ ಹೇಳಿದೆನು. ನಂತರ ಎಲ್ಲರಿಗೂ ರುಚಿಯಾದ ಭೋಜನ ಏರ್ಪಾಡಾಗಿತ್ತು. ಬಿಸಿಬೇಳೆ ಬಾತ್, ಮಿಕ್ಸಚರ್, ಗಸಗಸೆ ಪಾಯಸ, ಬೋಂಡ, ಮೊಸರನ್ನ, ಉಪ್ಪಿನಕಾಯಿ ಎಲ್ಲಾ ರುಚಿಯಲ್ಲಿ ಒಂದು ಇನ್ನೊಂದಕ್ಕೆ ಪೈಪೋಟಿ ಕೊಡುವಂತೆ ತಟ್ಟೆಯಲ್ಲಿ ರಾರಾಜಿಸುತ್ತಿತ್ತು. ಸಮಾರಂಭಕ್ಕೆ ಆಗಮಿಸಿದ ಮುತ್ತೈದೆಯರಿಗೆ ವೈವಿಧ್ಯಮಯವಾದ ಅರಿಶಿನ ಕುಂಕುಮ ಚಂದನದ ಸುಂದರವಾದ ಮಾವಿನ ಕಾಯಿಯ ಆಕಾರದ ಡಬ್ಬಿ, ಅಚ್ಚುಕಟ್ಟಾಗಿ ಪ್ಯಾಕ್ ಮಾಡಿದ, Convocation Degree Certificate ನೆನಪಿಗೆ ತರುವ ರವಿಕೆಯ ಕಣ, ಸಿಹಿ ಖಾರದ ತಿಂಡಿ, ತೆಂಗಿನಕಾಯಿ, ಅಡಿಕೆ-ಎಲೆ, ಸುಂದರವಾದ ದೇವರನ್ನು ಇಡುವ ಬಂಗಾರದ ಬಣ್ಣದ ಪೀಠವನ್ನು ಕೊಟ್ಟು ಎಲ್ಲರನ್ನೂ ಸತ್ಕರಿಸಿದರು.

ಕಡೆಯದಾಗಿ ಕುಟುಂಬದವರೆಲ್ಲರನ್ನೂ ಒಟ್ಟಾಗಿ ಫ್ಯಾಮಿಲಿ ಫೋಟೋ ತೆಗೆಯಲು ಹೋದಾಗಲೇ ಅರಿವಿಗೆ ಬಂದದ್ದು ಅಬ್ಬ ಅದೆಷ್ಟು ದೊಡ್ಡ ಕುಟುಂಬ ಎಂದು. ಇಬ್ಬರು ಛಾಯಚಿತ್ರ ತೆಗೆಯುವವರು ಎಲ್ಲರನ್ನೂ ಚೌಕಟ್ಟಿನಲ್ಲಿ ಸೆರೆಹಿಡಿಯಲು ಹರಸಾಹಸ ಮಾಡಬೇಕಾಯಿತು. ಇದರಿಂದ ಒಂದು ಕಟು ಸತ್ಯದ ಅರಿವಾಯಿತು. ಒಂದು ಭಾವಚಿತ್ರದ ಚೌಕಟ್ಟಿಗೆ ಎಲ್ಲರೂ ಬರುವಂತೆ ಒಟ್ಟು ಗೂಡಿಸುವುದು ಇಷ್ಟು ಕಷ್ಟ ಇರುವಾಗ, ಆ ಮಹಾತಾಯಿ ತನ್ನ ನಿತ್ಯ **(ಪುಟ 9ಕ್ಕೆ)**

# ದೋಣಿ ಗಂಡಿ

"ಕೂ..... ಕೂ.... ವಾ.... ಕೂ... ಹೋಯ್ ಯಾರಾದ್ರೂ ಹೊಳೆಯಾಚೆ ಹೋಗೋರಿದ್ರೆ ಬನ್ರಲಾ, ನೆರೆ ಏರ್ತಿದೆ. ಮತ್ತೆ ನಾಳೆಯೊ ... ನಾಡಿದ್ದೋ ದೋಣಿಯನ್ನು ಹೊಳೆಗಿಳಿಸುವುದು. ಕೂ... ಕೂವಾ..."

ಎರಡೂ ಕೈಯನ್ನು ಬಾಯ್ಗೆ ಅಡ್ಡವಿಟ್ಟುಕೊಂಡು ತನ್ನಿಂದಾದಷ್ಟು ಗಟ್ಟಿ ಸ್ವರದಲ್ಲಿ ಕೂಗಿ... ಕೂಗಿ.. ಜನರನ್ನು ಕರೆಯತೊಡಗಿದ್ದ ಕರಿಯ. "ಓ ಕರಿಯಾ, ಆಗ್ಲೆ ಕುಂಭದ್ರೋಣ ಮಳೆ ಶುರುವಾಗಿದೆ. ಜೊತೆಗೆ ಥಂಡಿ ಗಾಳಿ ಬೇರೆ ಬೀಸ್ತಿದೆ. ಎಷ್ಟೋತ್ತೂಂತ ಇಲ್ಲಿ ಈ ಹೊಳೆ ಬುಡದಾಗೆ ಹೆಣ ಕಾದಂತೆ ಕಾಯ್ತ ಕುಳಿತಿರುವುದು. ದೋಣಿ ಬಿಡಯ್ಯ. ಅತ್ಲಾಗೆ ಕತ್ತಲಾಗುವ ಮುಂಚೆ ಮನೆ ಕಡೆ ಸೇರ್ಕ್ಕೋಂಡ್ರೆ ಸಾಕು ಮಾರಾಯಾ. ಉಡ್ರು ಹೆಚ್ಚಾಗಿ ನಡುಕ ಶುರುವಾಗಿದೆ. ಈಗಾಗ್ಲೆ ಇನ್ನೂ ಬಂದಿಲ್ಲವೆಂದು ಮನೆಯ ಹೊರ್ಗೆ ಬಂದು ಹೆಂಗ್ಸುರು, ಮಕ್ಕಳು ಎಲ್ಲಾ ಕಾಯ್ತಿರಬಹುದು. ಬ್ಯಾಡಾಂದ್ರೂ ಕೇಳ್ದೆ ಪೇಟೆಗೆ ಬಂದಿದ್ದಾಯ್ತು. ಯಾವ ಕೆಲ್ಸವೂ ಆಗಿ ಬರ್ಲಿಲ್ಲ. ಕುಟ್ಟಿ ಕುಂದಾಪುರಕ್ಕೆ ಹೋಗಿ ಬಂದ್ಹಾಗೆ, ಬರಿಗೈಲಿ ಮನೆಗೆ ಹೋಗುವುದೇ ಕರ್ಮವಾಗಿದೆ. ಬೆಳಗ್ಗೆಯಿಂದ ಬೈಗಿನ ತನ್ಕ ಕಾದ್ರೂ ಆ ಡಾಕ್ಟ್ರಯ್ಯ ಸಿಗ್ಲಿಲ್ಲ. 'ಊರಿಗೊಬ್ಳೆ ಸುಂದ್ರಿ' ಅಂದ್ಹಾಗೆ ಶೀತ, ಜ್ವರ, ನೆಗಡಿಗೆಲ್ಲ ಇವ್ನು ಕೊಡುವ ಬಣ್ಣದ ನೀರು ನೆಚ್ಕೊಂಡು ಹೋಗಿ ಬಾಗ್ಲು ಕಾಯುವುದೇ ಆಯ್ತು. ಈಗೀಗ ಮಹಾ ಕೊಬ್ಬು, ಕುದ್ರೆ ಮೇಲೆ ನಿಂತ್ಕಂಡವನಂತೆ ಆಡ್ತಾನೆ. ಶಾನೇ ಜಂಭ ವಕ್ಕರಿಸ್ಕೊಂಡು ಬಿಟ್ಟಿದೆ. ಯಾವಾಗ್ಲೂ ಬಾಗಿಲ್ಹಾಕಿ ಹೊರ ತಿರುಗಾಟವೇ ಹೆಚ್ಚಾಗಿ ಬಿಟ್ಟಿದೆ. ಸದ್ಯ ಎತ್ತಂಗಡಿ ಮಾಡ್ತಾನೇನೋ ? ಮಹಾ ಘನಂದಾರಿ ಡಾಕ್ಟ್ರು ಇವ್ನು ! ಕೈಯಲ್ಲಿ ಮೂರ್ಕಾಸು ಓಡಾಡ್ತಿದೆಯಲ್ಲ. ನೆಲ ಕಾಣಿಸ್ತಿಲ್ಲವಷ್ಟೆ" ನಾರಾಯಣ ಚಳಿಗೆ ಉ ಹು ಹು... ಗದಗುಟ್ಟಿ ನಡುಗ್ತ ಡಾಕ್ಟ್ರ ಮೇಲೆ ತಮ್ಮ ಕೋಪ ಕಾರಿಕೊಂಡರು.

"ಹೌದ್ರಿ, ಅಯ್ಯಾ, ಎಲ್ಲರೂ ಅಷ್ಟೇ. ಹೊಟ್ಟೆ ಹಸಿದಾಗ ನಿಯತ್ತಿನಲ್ಲಿರ್ತಾರೆ. ಹೊಟ್ಟೆ ತುಂಬಿದಾಗ ಮೆರೆಯಲು ತೊಡಗ್ತಾರೆ. ಮೈ ಮುರಿದೇನಾದ್ರೂ ಕೆಲ್ಸ ಮಾಡಿದ್ರೆ ಅದರ ಬೆಲೆ ಗೊತ್ತಾಗ್ತಿತ್ತು. ಎಲ್ರಿಗೂ ರೊಕ್ಕ ಬೇಕು. ಶ್ರಮ ಬೇಡ" ಕೂ... ಕೂವಾ... ಕರಿಯ ಮಾತನಾಡ್ತಲೆ ತನ್ನ ಗಿರಾಕಿಗಳಿಗಾಗಿ ಕೊನೆಯ ಕೂಗು ಹಾಕಿದವ್ನೆ. "ಇನ್ಯಾರೂ ಬರುವುದಿಲ್ಲಾಂತ ಕಾಣಿಸುತ್ತೆ" ಎಂದೆನ್ನುತ್ತ ದೋಣಿಯ ಹಗ್ಗ ಬಿಚ್ಚಿದವನೆ ದೋಣಿಯನ್ನು ಸ್ವಲ್ಪ ಸ್ವಲ್ಪವಾಗಿ ನೀರಿನಲ್ಲಿ ತಳ್ಳಿದ. ದೋಣಿ ಮೆಲ್ಲನೆ ಓಲಾಡ್ತ... ತೇಲಾಡ್ತ ಚಲಿಸಲು ಪ್ರಾರಂಭಿಸಿತು. ಅಷ್ಟರಲ್ಲಿ "ಓ ಅಂಬಿಗಯ್ಯ ಸ್ವಲ್ಪ ನಿಲ್ಲು, ನಾನು ಬರ್ತಿದ್ದೀನಿ" ಎಂಬ ಕೂಗೊಂದು ಕೇಳಿಸಿದಾಗ "ತಥ್, ಇದರವ್ವನ ಅಂದು, ಇಷ್ಟೊಹೊತ್ತು ಯಾರ ತೆಕ್ಕೆಯಲ್ಲಿ ಬೆಚ್ಚಗೆ ಮಲ್ಕಂಡಿದ್ನೋ ಈಗ ಎಚ್ಚರವಾಗ್ತಿದೆ" ಗೋಪಯ್ಯ ಹಲಗೆ ಹಿಡ್ದು ಸರಿಯಾಗಿ ಕುಳಿತುಕೊಳ್ತ ಹೇಳಿದರು.

"ಈ ವಾರ ದಾಸಯ್ಯಂಗೆ ಹೆಂಗ್ಸರು ದೋಣಿಯೊಳ್ಗೆ ಇದ್ದಾರೆಂಬುದೇ ಮರ್ತು ಹೋದಂತಿದೆ. ಸ್ವಲ್ಪ ನಾಲ್ಗೆ ಬಿಗಿ ಹಿಡ್ದು ಮಾತ್ನಾಡುವುದನ್ನು ಕಲಿ ಗೋಪಯ್ಯ ಎಲ್ರೂ ಇರುವಾಗ ಹೀಗೆ ಹೊಲ್ಸು ಹೊಲ್ಸು ನುಡಿ ಹೊರ್ಹಾಕುವುದು ಸರಿಯಲ್ಲ" ನಾರಾಯಣ ತಾವುಟ್ಟಿದ್ದ ಪಂಚೆಯನ್ನು ಸರಿಯಾಗಿ ಮಡ್ಚಿಕೊಳ್ತಾ ದೋಣಿಯಲ್ಲಿರುವ ನೀರಿಗೆ ಒಂಚೂರೂ ತಾಗದಂತೆ ಕುಳ್ತುಕೊಂಡರು.

"ಮಹಾ ಸುಬಗರು, ಒಂದೇ ಪಂಚೆ ಇರುವ್ಹಾಗೆ ಒದ್ದಾಡ್ತಿದ್ರಿ. ಆ ಪಾಟಿ ಕೊಳ್ತು ಸುರಿವಷ್ಟು ಆಸ್ತಿಯಿದೆ. ಆಸ್ತಿ ತೊಳೆಯಲು ಒಬ್ನೇ ಒಬ್ಬ ವಂಶೋದ್ಧಾರಕನಿಲ್ಲ. ಮತ್ತೇಕೆ ಇಷ್ಟಾಸೆ ?" ಸೇರಿಗೆ ಸವ್ವಾಸೇರೆಂಬ ಹಾಗೆ ಗೋಪಯ್ಯ ತಮ್ಮ ಮನದಲ್ಲಿದ್ದ ಮಾತನ್ನು ಹೊರ ಹಾಕಿದರು.

"ಕೊಳ್ತು ಹೋಗುವಷ್ಟಿದ್ರೂ, ನಿಂಗೊಂಚೂರೂ ಕೊಡೋಲ್ಲ. ತಿಳ್ಕೊ. ಪಂಚೆ ಬರಿ ಕೆಸರಾದ್ರೆ ತೊಳ್ಕೋಬೋದು. ನೀರ್ಗಚ್ಚೆಯಾದ್ರೆ ಕಷ್ಟ. ಮತ್ತದು ಹರಿದು ಹೋಗುವ ತನ್ಕ ಕಲೆ ಹೋಗೋಲ್ಲ. ಅಲ್ಲಲ್ಲಿ ಕಪ್ಪು ಚುಕ್ಕಿಗಳಾಗಿ ಉಳಿದುಕೊಳ್ತವೆ. ನೋಡುವುದಕ್ಕೆ ಅಸಯ್ಯ" ಅವರು ಹೇಳಿ ಬಿಡ್ತಿದ್ದ ಹಾಗೆ ಆ ಮಬ್ಬು ಮಳೆ ಗತ್ತಲಲ್ಲಿ ಒಬ್ಬ ಬಂದು ದೋಣಿಯೊಳ್ಗೆ ಕಾಲಿಟ್ಟ. ಅವನು ಕಾಲಿಟ್ಟ ರಭಸಕ್ಕೆ ದೋಣಿ ಮಗುಚಿಕೊಳ್ಳುವಂತಾದಾಗ ಕರಿಯ ಗಟ್ಟಿಯಾಗಿ ಹಿಡ್ಕೊಂಡು, "ಹಾಗಲ್ಲ ಮಾರಾಯ್ರೆ, ನಿಧಾನವಾಗಿ ಕಾಲೂರಿ ಕುಳ್ತುಕೊಳ್ಳಬೇಕು. ಇಲ್ಲದಿದ್ರೆ ದೋಣಿ ಮೊಗ್ಚಿ ನಿಮ್ಮೊಂದಿಗೆಲ್ಲ ನೀರ್ಪಾಲಾಗ್ತಾರೆ. ನಂಗೆ ಕೆಟ್ಟ ಹೆಸರಷ್ಟೆ. ದೋಣಿಗಂಡಿ ಕರಿಯ ಅಂದ್ರೆ ಜನರಿಗೆಲ್ಲ ನಂಬ್ಕೆಯಿದೆ. ಅದ್ಯಾಕೆ ಕ್ಷುಲ್ಲಕ ಕಾರ್ಣದಿಂದ ಕೆಟ್ಹೋಗಬೇಕಲ್ವಾ ?"

"ಹೂಂ... ಹೂಂ... ದೋಣಿಯಲ್ಲಿ ಕುಳ್ತುಕೊಳ್ತಿರುವುದು ಇದೇ ಮೊದ್ಲು. ನಂತರ ನಿಧಾನವಾಗಿ ಕಲ್ತುಕೊಳ್ತೀನಿ. ಎಲ್ಲಿ ದೋಣಿ ಹೊರ್ಟುಹೋಗಿರುತ್ತೋ ನಾನಾಚೆ ದಡ ತಲುಪಲಿಕ್ಕೆ ಆಗದೆ ಈಚೆ ದಡದಲ್ಲೆ ನಿಂತಿರ್ಬೇಕಾಗುತ್ತೋ ಅಂದ್ಕೊಂಡ್ಡಿದೆ. ಹೊಳೆಗಳಿಗೆ ಗಳಿಗೆಗೂ ಏರ್ತಿದೆಯಂತೆ. ಕಿಗ್ಗ ನೆಮ್ಮೂರ್ಕಡೆ ಮಳೆ ರಾಶಿ ರಾಶಿ ಸುರೀತಿದ್ಯಂತೆ: ಅಯ್ಯಪ್ಪ ಎಂತಾ ಮಳೆ : ನಾನಿಷ್ಟು ನೀರು ಮೇಲಿನಿಂದ ಬೀಳುವುದನ್ನು ನೋಡಿಯೇ ಇರ್ಲಿಲ್ಲ"

"ಹೌದಾ ? ಹಾಗಿದ್ರೆ ನಿಮ್ಮದು ಅದೆಂತ ದರಿದ್ರದ ಊರಯ್ಯಾ ? ಗೋಪಯ್ಯ ಸರಕ್ಕನೆ ಕೇಳ್ದಾಗ ಆ ಯುವಕ ದೋಣಿಯಲ್ಲಿದ್ದ ಇತರರತ್ತ ಕಣ್ಣು ಹಾಯಿಸಿದ. ಇಬ್ಬರು ಗಂಡಸರಲ್ಲದೆ ಮೂವರು ಹೆಂಗಸರು ಒಂದು ಮಗುವಿರುವುದನ್ನು ಗಮನಿಸಿದವನೆ ಸುಮ್ಮನಾದ.

ದೋಣಿಯನ್ನು ನೀರಿಗೆ ತಳ್ಳಿ ಕೈಯಲ್ಲಿ ಹುಟ್ಟನ್ನು ತೆಗ್ದುಕೊಂಡು ನೀರನ್ನು

✍ ಶಾರದಾ ಉಳವೆ

ಹಿಂದೆ ತಳ್ತಾ ಮೆಲ್ಲಗೆ ಗುನುಗ ಹತ್ತಿದ ಕರಿಯನನ್ನೇ ಆ ಮಬ್ಬುಗತ್ತಲಲ್ಲಿ ಎವೆಯಿಕ್ಕದೆ ನೋಡ್ತಾ ಆತ ಹೇಳ್ತಿದ್ದ. ಹಾಡಿನತ್ತ ಗಮನವಿಟ್ಟು ಕೇಳತೊಡಗಿದ.

"ಅಂಬಿಗರು ನಾವು..... ಅಂಬಿಗರು ನಾವು
ಬಾಳ ಕಡಲಿನ ನಿತ್ಯ ಯಾತ್ರಿಕರು ನಾವು
ಏಸು ದೂರದ ಪಯಣ
ಒಂದು ಕ್ಷಣ ಮಿಲನ ಆ... ಲ... ಲ.... ಲ... ಲಾ....."

ಎಂತಹ ಜೀವನ ದರ್ಶನ ಅಂಬಿಗನ ಹಾಡಿನಲ್ಲಿ ! ಅತ್ಯದ್ಭುತ !! ಜೀವರಸದ ಮಧುರತೆಯನ್ನು ಇಂಚಿಂಚೂ ಸವಿಯುವುದು ಇಂತಹವರಿಂದ ಮಾತ್ರ ಸಾಧ್ಯವೇನೋ ? ಅಡಿಯೂ ಇಲ್ಲ. ಆಕಾಶವೂ ಇಲ್ಲದಿದ್ದರೂ ಜೀವನ ಪ್ರೀತಿ ಧಾರಾಳವಾಗಿದೆ. ಆದ್ರೆ ನನ್ಗೆ ಈ ತನ್ಮಯತೆ, ನಿಶ್ಚಿಂತೆ ಈ ತನ್ಕ ಸಿಕ್ಕಿಲ್ಲ. ಯಾವಾಗ್ಲೂ ಅವಸರ ಚಿಂತೆ. ಮರಳಿ ಹೋಗುವಾಗ ಕರಿಯನನ್ನು ತಪ್ಪದೆ ಸಂದರ್ಶನ ಮಾಡ್ಬೇಕು. ಜೀವನದ ಗುಟ್ಟನ್ನು ಕೇಳಿ ಕಲ್ತುಕೊಳ್ಳಬೇಕು. ಇವ್ನ ವಿಳಾಸ ಈಗ್ಲೇ ಕೇಳಿ ಪಡೆದಿರುವುದುತ್ತಮವೆಂದ್ಕೊಂಡು ಕೇಳಿದ. ಕರಿಯ, "ನಿನ್ಮನೆ ಎಲ್ಲಿದೆ ಹೇಳಯ್ಯ. ವಾಪಸ್ಸು ಹೋಗುವಾಗ ನಾನು ಬಂದು ನಿನ್ನ ಕಾಣ್ಬೇಕು.

"ಎಂತದಯ್ಯ ನೀವು ಕೇಳ್ತಿರುವುದು?" ಕರಿಯ ಹಾಡು ನಿಲ್ಸಿ ಕಿಸಕ್ಕನೆ ನಕ್ಕ. "ಈ ದೋಣಿಗಂಡಿ ಕರಿಯನಿಗೆ ಮನೆ ಎಂದೊಂದಿದೆಯಾ ? ಒಳ್ಳೇ ತಮಾಷೆ ನಿಮ್ಮದು. ಸದಾ ಅವರಿವರ ಮನೆಯ ಚಕ್ಕೆ, ಕುಂಟೆ ವಡ್ಕೊಂಡು, ದನಗಳನ್ನು ಮೇಯಿಸ್ಕೊಂಡು ಯಾರು ಏನು ಕೆಲ್ಸ ಹೇಳ್ತಾರೋ ಅದ್ನ ನನ್ನ ಕೈಲಾದ್ರೆ ಮಾಡ್ತ ಮಳೆಗಾಲದಾಗೆ ದೋಣಿ ನಡೆಸುವ ನಂಗ್ಯಾಕೆ ಮನೆ? ಮಡದಿ, ಮಕ್ಳು ಇದ್ದೋರಿಗೆ ಅದೆಲ್ಲ. ಹಾಗೊಂದ್ಲೆಕ್ಕ ಹೇಳ್ಬೇಕಾದ್ರೆ, ಈ ಹೊಳೆಯೇ ಮನೆ. ದೋಣಿಯೇ ಮಡದಿ, ಹುಟ್ಟೇ ಮಗು. ಈ ಸಂಸಾರ ಬಂಧನವೆಂಬುವುದು ಮಳೆಗಾಲದಲ್ಲಿ ಮಾತ್ರ. ಅಂತಹ ಅದೃಷ್ಟ ನೋಡಿ ಈ ಅಂಬಿಗನದಲ್ವಾ ?" ಅಗಾ, ತಗೊಳ್ಳಿ, ಗೋಪಯ್ಯಂಗೆ ಕುಂಡಿ ತುರ್ಸಿಲಕ್ಕ ಹತ್ಕೊಂಡಿದೇಂತ ಕಾಣ್ತದೆ. ಅದ್ಕೆ ಎದ್ದೆದ್ದು ಕೂಗ್ತಿರ್ತಾರೆ. ಕರಿಯ ಮತ್ತೊಮ್ಮೆ ಮುಕ್ತವಾಗಿ ನಕ್ಕನಾದ್ರೂ ಅವ್ನಿಗೆ ಗೋಪಯ್ಯನ ಗುಣವೆಂತದ್ದೆಂದು ಗೊತ್ತಿತ್ತು.

"ಆ ಹೊಸಬ ಯಾರೆಂದು ಎಲ್ಲರಿಗಿಂತ ಮೊದ್ಲು ತಿಳ್ದುಕೊಳ್ಳಬೇಕೆಂಬ

ಹಂಬಲ ತೊಣಚಿ ಹೊಕ್ಕಂತೆ. ಗೋಪಯ್ಯನನ್ನು ಕಾಡ್ತಿದೆಯೆಂದು ಬಲ್ಲನಾತ. ನಾರಾಯಣಯ್ಯ ಹಾಗಲ್ಲ. ಸ್ವಲ್ಪ ಗಂಭೀರ. ಅವ್ರಿಗೆ ಗಂಡುಮಕ್ಕಳಿಲ್ಲವೆಂಬ ಚಿಂತೆ ಬಿಟ್ರೆ ಬೇರೆಲ್ಲವನ್ನೂ ಆ ದೇವ ಕೊಟ್ಟಿಟ್ಟಿದ್ದಾನೆ. ಇನ್ನು ಆ ಮೂರು ಹೆಂಗ್ಸಿರಿಗೆ ಎಷ್ಟೊತ್ತಿಗೆ ಮನೆ ತಲುಪಿಯೇವು. ಈ ಒದ್ದೆ ಮುದ್ದೆ ಬಟ್ಟೆ ಬಿಚ್ಚಿಟ್ಟು ಬೆಚ್ಚಗೆ ಬೇರೆಯುಟ್ಟು ಮಲ್ಗಿಯೇವು ಎಂಬಕ್ಕಡೆ ಆಲೋಚನೆ. ದೋಣಿಯೊಳ್ಗೆ ಕೂರುವಾಗ್ಲೆ ಕೇಳಿದ್ದರು. "ಬೇಗ ಆಚೆ ದಡ ಸೇರಿಸ್ತೀಯಲ್ವಾ" ಹೂಂ ಎಂದಿದ್ದೆ ತಾನು. "ಆದ್ರೆ ತನ್ನದೂ ಒಂದು ಜೀವವಲ್ವಾ ? ಅದ್ಕೂ ಸ್ವಲ್ಪ ಆಸೆ ಇರ್ತದಲ್ವಾ ? ಕೊಡುವ ಎಂಟಾಣೆಗೆ ಚೂರ್ನೊತ್ತು ಕಾದ್ರೆ ಕಾಯ್ಲಿ. ಇನ್ನೊಬ್ರು ಬಂದ್ರೆ ಮತ್ತೆ ಎಂಟಾಣೆ ಹೆಚ್ಗೆ ಸಿಗುತ್ತದೆಂದು. ಒಂದು ಕೊಟ್ಟೆ ಹೊಟ್ಟೆಗಿಳಿಸಿದ್ರೆ ಮಳೆ ಥಂಡಿಯ ಉಡುರೆಲ್ಲ ಹೋಗಿ ಸ್ವರ್ಗದಲ್ಲಿ ತೇಲಬಹುದು" ಕರಿಯ ಕ್ಷಣ ದೂರಾಲೋಚನೆಗೆ ಇಳಿದಿದ್ದನಾದ್ರೂ ಪುನಹ ತನ್ನ ಹಾಡಿಗೆ ಮರಳಿದ್ದ. "ಅಂಬಿಗರು ನಾವು... ಕೇಳ್ತಿದ್ದ ಯುವಕ, ದೋಣಿ ಮುಂದೆ ಹೋಗುತ್ತಿತ್ತು.

* * *

"ಏಯ್ ಕರಿಯ ಇದೆಂತದ್ದೋ ದೋಣಿ ದಡ ಸೇರ್ದೆ ಎಲ್ಲೆಲ್ಲೋ ಹೋಗ್ತಿದೆಯಲ್ಲೋ ? ಸರಿಯಾಗಿ ಹುಟ್ಟು ಹಾಕಯ್ಯ. ಅಡ್ಡಾಪಡ್ಡ ಹಾಕಿ ನಮ್ಮನ್ನ ಮುಳುಗಿಸ್ಬೇಡ. ನನ್ನ ಹೆಂಡ್ತಿ ಬಸುರಿ ಕಣಯ್ಯಾ. ಈಗ್ಲೆ ಮುಂಡೆಯಾದ್ರೆ ಮುಂದೆ ಹುಟ್ಟುವ ಮಗು ಮುಂಡೆ ಮಗ ಅಂತನ್ನಿಸಿಕೊಳ್ತದೆಯಯ್ಯ. ಹಾಗಾಗಬಾರ್ದು. ಗಂಡ್ಮಗು ಹುಟ್ಟದೆಂದು ಪುರುಷಸೂಕ್ತ ಹೋಮ ಮಾಡಿಸಿರುವೆ" ಗೋಪಯ್ಯಾ, ಆ ಕತ್ತಲಲ್ಲೂ ನಾರಾಯಣಯ್ಯನ ಮುಖಚರ್ಯೆ ಗಮನಿಸಲು ಯತ್ನಿಸಿದರಾದ್ರೂ ಸಫಲರಾಗಲಿಲ್ಲ. ದೋಣಿ ಸುಳಿಗೆ ಸಿಕ್ಕು ಸರ್ರನೆ ಕೆಳಮುಖವಾಗಿ ತೇಲತೊಡಗಿದಾಗ ಕರಿಯ ಹುಟ್ಟು ಹಾಕುವುದನ್ನು ನಿಲ್ಸಿ ಕೂಗಿ ಹೇಳಿದ.

"ಎಲ್ರೂ ಸರಿಯಾಗಿ ಕುಳ್ತುಕೊಂಡು ಗಟ್ಟಿಯಾಗಿ ಹಿಡ್ಕೊಳ್ಳಿ. ಹೆದ್ರಬೇಡಿ. ಸುಳಿಗೆ ಸಿಕ್ಕಿದ್ದರಿಂದ ಸ್ವಲ್ಪ ಕೆಳಗೆ ಹೋಗಿ ಬರ್ತದಷ್ಟೆ. ಮತ್ತೇನಾಗೋಲ್ಲ. ಒಂದ್ವೇಳೇ ಆದ್ರ ನಾವೆಲ್ಲ ಮುಳುಗಿ ಹೋಗ್ತೀವಷ್ಟೇ " ದರಿದ್ರದ ಕರಿಬಾಯ್ಗೆ ಮೂರ್ಮುಷ್ಟಿ ಮಣ್ಣಾಕ್. ಎಂತ ಮಾತನಾಡ್ತಿದ್ದಿ. ಮುಳಗಲಿಕ್ಕೆ ನಿನ್ನ ದೋಣಿಯೇ ಬೇಕಾಗಿತ್ತಾ? ಹಾಗೆ ನದಿಗಿಳಿದಿದ್ರೆ ಅಥ್ವಾ ಹಾರಿದ್ರೆ ಸಾಕಿತ್ತು. ಮುಳುಗಿ ಹೋಗ್ತಿದ್ದೆವು. ದೇವ್ರಿದ್ದಾನೆ ಕಣಯ್ಯಾ. ಏನಾಗಲ್ಲ. ಆಚೆ ದಡವೊಂದು ಸಿಕ್ಲಿ. ಮತ್ತೆ ನೋಡ್ಕೊಳ್ತೀನಿ" ಗೋಪಯ್ಯ ಹೆದ್ರಿಕೆಯಿಂದ ಕರಿಯನನ್ನು ಬಯ್ಯತೊಡಗಿದರು.

"ಏನೂ ಆಗೋಲ್ಲ. ಮುಳ್ಗಬೇಕೆಂದು ನಮ್ಮ ಹಣೆಯಲ್ಲಿ ಬರ್ದಿದ್ದರೆ ಮುಳುಗುತ್ತೆ. ಇಲ್ಲೂ ತೇಲುತ್ತೆ. ತೇಲಿಸೋ.... ಇಲ್ಲಾ ಮುಳುಗಿಸೋ ನಿನ್ನ ಕಾಲಿಗೆ ಬಿದ್ದೆನಯ್ಯ. ಪರಮದಯಾಳು ಹರಿಯೇ " ನಾರಾಯಣಯ್ಯ ದೇವರ ಭಜನೆಗಿಳಿದಿದ್ದರೆ ಹೆಂಗಸರು ಭೀತಿಯಿಂದ ಬಾಯ್ಗೆ ಸೆರಗೊತ್ತಿ ಹಿಡಿದು ಕುಳಿತಿದ್ದರು. ಮಗು ಪರಿಸ್ಥಿತಿ ಅರಿವಿಲ್ಲದೆ ತೂಕಡಿಸುತ್ತಿತ್ತು. ಯಾವ ಭಯ ಭೀತಿ ಇಲ್ಲದೆ ಆ ರುದ್ರ ರಮಣೀಯ ನದಿಯ ನರ್ತನ ನೋಡ್ತ ಕುಳಿತಿದ್ದ ವ್ಯಕ್ತಿ ಆತನೊಬ್ನೆ. ಅವನ ನಿಶ್ಚಲ, ನಿಶ್ಚಿಂತ ವರ್ತನೆ ಕಂಡು ನಾರಾಯಣ ತಡೆಯಲಾರದೆ ಕೇಳಿಯೇ ಬಿಟ್ಟರು.

"ಏನಯ್ಯ ನಿನ್ನ ಹೆಸರು ? ದೋಣಿಯೊಳ್ಗೆ ಇದೇ ಮೊದಲು ಕೂತಿದ್ದು ಅಂತಿದ್ದಿ. ಈಗ ಕೆಳಮುಖವಾಗಿ ಹೋಗ್ತಿದ್ದರೂ ಸುಮ್ನಿದ್ದಿಯಲ್ಲ. ಹೆದ್ರಿಕೆಯಾಗೊಲ್ವಾ ? ಅಪ್ಪ- ಅಮ್ಮನ ನೆನಪು ಬರೋಲ್ವಾ?"

ಅಪ್ಪ- ಅಮ್ಮ ಇದ್ದರಲ್ವಾ ನೆನಪು ಬರುವುದಕ್ಕೆ. ಅದಲ್ಲದೆ ಈ ಅವಿನಾಶನಿಗೆ ಹೆದ್ರಿಕೆ ಎಂದರೇನೆಂದೇ ಗೊತ್ತಿಲ್ಲ. ಕೆಳಮುಖವಾಗಿದ್ದೆಲ್ಲ ಯಾವಾಗಲಾದ್ರೂ ಮೇಲ್ಮುಖವಾಗಿ ಬರಬಹುದೆಂದು ಆಶಾವಾದಿ ನಾನು. ನಿರಾಶಾವಾದಿಯಂತೂ ಖಂಡಿತಾ ಅಲ್ಲ. ನಿರಾಸೆಯಿದ್ದಿದ್ದರೆ ನಾನಿಲ್ಲಿಗೆ ಬರಬೇಕಾಗಿಯೆ ಇರ್ಲಿಲ್ಲ. ಅಂದ್ಹಾಗೆ ತಾವು ಯಾರೆಂದು ಗೊತ್ತಾಗಲಿಲ್ಲ. ನಾನು ಊಸರವಳ್ಳಿಗೆ ಹೋಗ್ಬೇಕು. ದೋಣಿ ದಾಟಿದ್ಮೇಲೆ ಅದೆಷ್ಟು ದೂರವಿದೆ ?

"ಊಸರವಳ್ಳಿಗಾ.....?" ಗೋಪಯ್ಯ, ನಾರಾಯಣಯ್ಯ ಇಬ್ಬರೂ ಒಟ್ಟಿಗೆ ಕೇಳಿದಾಗ ಅವಿನಾಶನ ಮೊಗದಲ್ಲಿ ಅಚ್ಚರಿಯ ನೋಟವೊಂದು ಕ್ಷಣ ಹಾದು ಹೋಯ್ತು. ಅದ್ನ ಗುರುತಿಸುವ ಶಕ್ತಿ ಆ ದೋಣಿಯಲ್ಲಿದ್ದ ಯಾರಿಗೂ ಇರಲಿಲ್ಲವಾದ್ರೂ ದೋಣಿಯಲ್ಲಿ ಆಗಿರಬಹುದಾದ ಕಂಡಿ ಕಂಡು ಹಿಡಿದು ಮೇಣ ಮೆತ್ತುವ ಕರಿಯ ಗಮನಿಸಿದ.

* * *

ತನ್ನ ಬಾಳು ಅದೆಷ್ಟು ಕಂಡಿಗಳಿಂದ ತುಂಬಿ ಹೋಗಿದೆಯೆಂದು ಅವಿನಾಶ ಯೋಚಿಸುತ್ತಿರುವಾಗ್ಲೆ ದೋಣಿ ಮೇಲ್ಮುಖವಾಗಿ ಚಲಿಸಲಾರಂಭಿಸಿತು. ಸೆಳೆತಕ್ಕೆ ಸಿಕ್ಕ ದೋಣಿಯನ್ನು ನಿಯಂತ್ರಣದಲ್ಲಿಡುವುದಾಗ್ಲಿ ಹುಟ್ಟು ಹಾಕಿ ತಿರುಗಿಸುವುದಾಗ್ಲಿ, ವ್ಯರ್ಥ ಪ್ರಯತ್ನವೆಂದರಿತಿದ್ದ ಕರಿಯ ಸೆಳೆತದ ರಭಸಕ್ಕೆ ಬಿಟ್ಟು ಸುಮ್ಮನಿದ್ದವನು ಈಗ ರಭಸ ಕಡಿಮೆಯಾದಾಗ ಹುಟ್ಟು ಹಾಕಿ ದೋಣಿಯನ್ನು ಮೇಲಕ್ಕೆ ತಂದು ಸರಿಯಾಗಿ ಚಲಿಸುವಂತೆ ಮಾಡಿದ್ದನ್ನು ನೋಡ್ತಿದ್ದವನಲ್ಲಿ ಅದೇನೋ ಭರವಸೆಯ ಕಿರಣವೊಂದು ತುಂಬಿಕೊಂಡಿತು. ನಿಧಾನವಾಗಿ ಚಲಿಸುತ್ತಿದ್ದ ದೋಣಿ ಹರಿಯುತ್ತಿದ್ದ ನೆರೆ ನೀರು, ಬೀಸುತ್ತಿದ್ದ ತಂಗಾಳಿ, ಅದಕ್ಕೆ ಪೂರಕವಾಗಿ ಕರಿಯ ಗುನುಗುತ್ತಿದ್ದ ಹಾಡು ಕೇಳ್ತಾ... ಕೇಳ್ತಾ... ತನ್ನ ಹುಟ್ಟನ್ನು ಕೈಗೆತ್ತಿಕೊಂಡು ಈ ತನಕ ನಡೆದು ಬಂದ ದಾರಿಯಲ್ಲಿ ನೆನಪಿನ ದೋಣಿ ಹರಿಯಬಿಟ್ಟ.

ತನಗೆ ಈ ದೋಣಿಯಷ್ಟು ಕೂಡಾ ಅದೃಷ್ಟವಿಲ್ಲ. ಈ ದೋಣಿಗಾದ್ರೆ ತನ್ನೊಡೆಯನೆಂದು ಹೇಳಿಕೊಳ್ಳಲು ಕರಿಯನಿದ್ದಾನೆ. ಮುಂದೆ ಚಲಿಸಲು ತನ್ನದೇ ಆದ ಹುಟ್ಟಿದೆ. ತನ್ನೊಳಗೆ ಬಂದವರನ್ನೆಲ್ಲ ಕುಳ್ಳಿರಿಸಿಕೊಳ್ಳುವ ವಿಶಾಲತೆಯಿದೆ. ಅದೇ ತನಗ್ಯಾವುದೂ ಇಲ್ಲ. ಒಡೆಯನ್ಯಾರೋ? ಹುಟ್ಟು ಎಲ್ಲಿಯೋ ? ಕ್ಷೇತ್ರ- ಬೀಜಗಳು ಎಲ್ಲಿ ಉತ್ತು ಬಿತ್ತಿದ್ದೋ ? ಒಂದರ ಕುರಿತೂ ನಿರ್ದಿಷ್ಟತೆ ಎಂಬುದಿಲ್ಲ. ತಾನು ಬೆಳ್ದು ದೊಡ್ಡವನಾದ್ಮೇಲೆ ಯಾರ್‍ಯಾರದೋ ಅನುಕಂಪದ ಮಾತುಗಳು ಕರ್ಣವನ್ನು ಸೀಳ್ಕೊಂಡು ಬಂದು ಎದೆಗಿಳಿದು ಮನಸ್ಸಿನಾಳಕ್ಕೆ ತಟ್ಟಿ ಚಿಂತೆ ಎಬ್ಬಿಸುತ್ತಿದ್ದವು. ಹೀಗಿರುವಾಗ್ಲೆ ಯಾರೋ ಕೈ ತುತ್ತು ಹಾಕಿ ಬೆಳೆಸಿದಜ್ಜಿ ಹೇಳಿದ್ದಳು. "ಅವಿನಾಶ, ಊರಾಚೆ ಹೊಳೆಯಿದೆ. ಆ ಹೊಳೆಗೊಂದು ಗಂಡಿಯಿದೆ. ಆ ಗಂಡಿಯಲ್ಲಿರುವುದು ಒಂದೇ ಒಂದು ದೋಣಿ. ಅದ್ನ ನಡೆಸುವಾತ ಕರಿಯ. ಆತನನ್ನು ಕೇಳಿದ್ರೆ ಆ ಹೊಳೆಯಾಚೆ ದಡ ತಲುಪಿಸಿ ಊಸರವಳ್ಳಿಗೆ ಹೋಗುವ ಮಾರ್ಗದ ಗುರ್ತು ಹೇಳ್ತಾನೆ. ಅಲ್ಲಿ ನಿನ್ನ ಹುಟ್ಟಿಗೆ ಕಾರಣರಾದವರು ಇರ್ಬಹುದು. ಹುಡ್ಕು ಹೋಗಯ್ಯ. ಸಿಕ್ಕಿದ್ರೆ ನಿನ್ನ ಅದೃಷ್ಟ. ಸಿಗದಿದ್ರೆ ದುರಾದೃಷ್ಟವೆಂದ್ಕೊಳ್ಬೇಡ. ಯಾಕಂದ್ರೆ ಎಲ್ಲರ ದೋಣಿಗೂ ಸರಿಯಾದ ಹುಟ್ಟಿರುವುದಿಲ್ಲ. ಅದ್ನೆ ದೊಡ್ಡದಾಗಿ ಮಾಡ್ಕೊಂಡು ಜೀವನವನ್ನು ಮುಳುಗಿಸ್ಕೊಳ್ಬೇಡ. ಎಷ್ಟೇ ನೆರೆ ನೀರು ಬಂದ್ರೂ ಕೊಚ್ಚಿ ಹೋಗ್ತದೆ ವಿನಃ ಮೊದಲಿನಿಂದ ಇದ್ದ ತಳದ ನೀರನ್ನು ಒಯ್ಯುವುದಿಲ್ಲ. ನಿನ್ತನಕ್ಕೆ ಚ್ಯುತಿ ಎಂಬುದಿಲ್ಲ. ಪುನಹ ಈ ಊರಿಗೆ ಮರಳಿ ಬಾ" ಅವಳಿಂದ ಮಾತಿನ ಮೇರೆಗೆ ಬಂದಿದ್ದಾಯ್ತು. ದೋಣಿಗಂಡಿ ಹುಡ್ಕಿ ಕುಳಿತಿದ್ದಾಯ್ತು. ಆಚೆ ದಡ ತಲುಪಿದರೆ ಸಾಕು ಹುಟ್ಟು ಹುಡ್ಕಬಹುದು. ತಳ- ಬುಡವಿಲ್ಲದೆ ಹುಟ್ಟನ್ನು ಹುಡುಕುವುದೆಷ್ಟು ಕಷ್ಟವಾಗ್ಬಹುದು. ಅಲ್ಲಿಯ ಜನರು ಹೇಗೋ ಏನೋ ? ಎಲ್ಲ ತಿಳ್ದುಕೊಳ್ಳಬೇಕು. ಎಲ್ಲದಕ್ಕೂ ಈ ಕರಿಯನನ್ನು ಅನುಸರಿಸಬೇಕು. ಈ ಕರಿಯನಾದ್ರೆ ಎಷ್ಟು ಹುಟ್ಟು ಕಂಡಿಲ್ಲ ! ಎಷ್ಟೆಷ್ಟು ಜನರನ್ನು ಆಚೀಚೆ ದಡ ತಲುಪಿಸಿಲ್ಲ. ದೋಣಿಯೊಳ್ಗೆ ಹೇಗೆ ನೀರು ಬರ್ತದೆ. ಎಲ್ಲಿ ಕಂಡಿಯಿದೆ ? ಎಲ್ಲಿ ತೇಪೆ ಹಾಕ್ಬೇಕು ? ಎಂಬ ಒಳ ಹೊರ್ಗನ್ನೆಲ್ಲೀ ತಿಳ್ದಾತ.

ಜೀವನದನುಭವದಲ್ಲಿ ಆತನೀಗ್ಲೆ ಮಾಗಿಯಾಗಿದೆ. ತಾನಿನ್ನೂ ಹೀಚು ಗೋಪಯ್ಯ, ನಾರಾಯಣರಲ್ಲಿ ಯಾಕೋ ನಾರಾಯಣರೇ ಮೆಚ್ಚುಗೆಯಾಗ್ತಿದ್ದಾರೆ. ಗೋಪಯ್ಯನದು ಹರ್ಕುಬಾಯಿ. ನಾನು ಹುಟ್ಟು ಹುಡ್ಕೊಂಡು ಬಂದಿರುವೆ ಎಂದು ತಿಳಿದರೆ ಹುಟ್ಟನ್ನಡಗಿಸಿ ಜನ್ಮವಿಲ್ಲದಂತೆ ಮಾಡ್ಬಹುದು" ಅವಿನಾಶ ಇನ್ನೂ ಏನೇನೋ ಯೋಚಿಸುತ್ತಾ ಇರುವಾಗಲೇ ಆ ದಡ ತಲುಪಿದ ದೋಣಿಯನ್ನು ಕರಿಯನಿಳಿದು ಎಳೆದು ನಿಲ್ಲಿಸಿದ. ಒಬ್ಬೊಬ್ಬರಾಗಿಳಿದು 'ಉಸ್ಸಪ್ಪಾ' ಎಂದು ದೀರ್ಘ ಉಸಿರು ಬಿಡ್ತಾ ಬ್ಯಾಗಿನಿಂದ ಬೆಚ್ಚನೆ ವಸ್ತ್ರ ತೆಗ್ದು ಹೊದ್ದುಕೊಳ್ತ ಸರಸರನೆ ಹೆಜ್ಜೆಹಾಕತೊಡಗಿದಾಗ ಅವಿನಾಶ ಕರಿಯನನ್ನು ಕೇಳಿದ.

"ಏಯ್, ಕರಿಯ ನೆರೆ ನೀರು ಏರ್ತಿದೆ. ನೀನು ಎಲ್ಲಿರ್ತೀಯಾ? ಹೇಗೆ ವಾಪಸ್ಸು

ಹೋಗ್ತಿಯಾ? ನಾನೀಗ ದೋಣಿಯಲ್ಲಿ ಬಂದಿದ್ದಕ್ಕೆಷ್ಟು ಹಣ ಕೊಡ್ಬೇಕು?"

"ಅಯ್ಯೋ ಶಿವ್ನೆ, ನಿಮ್ಗೆ ಗೊತ್ತಿಲ್ಲವಯ್ಯ. ಇನ್ನೆರಡ್ಮೂರು ದಿನ ಯಾರನ್ನೂ ದೋಣಿ ಹತ್ಸಿ ಹೊಳೆ ದಾಟಿಸುವ ಮಾತಿಲ್ಲ. ನೆರೆ ನೀರಲ್ಲಿ ಯಾರಾದ್ರೂ ದೋಣಿ ಕಟ್ಬಿಬಿಡ್ತಾರಾ? ಹಣ ನಿನ್ನ ಖುಷಿಯಯ್ಯ. ಎಂಟಾಣೆ ಕೊಡುವುದಕ್ಕೆ ಹಿಂದ್ಮುಂದೆ ಕುಯ್ಕೊತಾರೆ. ಪುಗ್ಸಟ್ಟೆ ಯಾಕೇಂತಷ್ಟು ಇಸ್ಕೋತೀನಿ". ನನ್ಗೆ ಇವರಿಬ್ರ ಮನೆಯ ಖಾಯಂ ಠಿಕಾಣಿ. ನಾರಾಯಣಯ್ಯನ ಮನೆ ಅಂದ್ರೆ ಧರ್ಮಛತ್ರವಿದ್ದಂತೆ. ಇವತ್ತು ನೀನ್ಕೂಡಾ ಅಲ್ಲಿಗೆ ಬಾ. ಏಂಡ್ರಯ್ಯಾ ಆಗ್ಬೋದಾ ? ಒಂದು ಹಿಡಿಯಕ್ಕಿ ಜಾಸ್ತಿ ಹಾಕಿದರಾಯ್ತು.

"ಸರಿ... ಸರಿ.. ನಮ್ಮೂರಿಗೆ ಹೊಸದಾಗಿ ಬರ್ತಿರುವ ಇವಯ್ಯ ನನ್ನ ಬೀದಿ ಮೇಲೆ ಬಿಡೋಕಾಗ್ತದ. ಎನಪ್ಪ, ಹಳ್ಳಿ ಮನ್ಗೆ ಹೊಂದಿಕೊಳ್ತಿಯಾ? ಇಲ್ಲೆಲ್ಲಾ ಹೊಟೇಲ್, ಲಾಡ್ಜ್ ಒಂದೂ ಇಲ್ಲ" ನಾರಾಯಣಯ್ಯ ಕೇಳಿದಾಗ ಅವಿನಾಶ ಆಯ್ತೆಂಬಂತೆ ಗೋಣಾಡಿಸಿದ.

ನಾರಾಯಣನ ಮನೆ ಬಹು ವಿಸ್ತಾರವಾಗಿದ್ದು ಎಲ್ಲಿ ಹೋದ್ರೆ ಎಲ್ಲಿ ಬರ್ಬೇಕೆಂದೆನ್ನುವುದೇ ಗೊತ್ತಾಗದಂತಾಗಿ ಒದ್ದಾಡುವಷ್ಟಿತ್ತು. ಆ ದಿನರಾತ್ರಿ ಬಿಸಿಯನ್ನು, ಸಾರು ಹಪ್ಪಳ  ಉಂಡವನು ಮರುದಿನ ಸೂರ್ಯೋದಯವಾಗ್ತಿದ್ದಂತೆ ಮೇಲೆದ್ದು ಎಲ್ಲವನ್ನೂ ಕೂಲಂಕಷವಾಗಿ ನೋಡಿದ. ಯಾಕೋ ತನಗೀ ಮನೆ ಅಪರಿಚಿತವಲ್ಲ ಅಂತನ್ನಿಸಿದಾಗ ಅಚ್ಚರಿಗೊಂಡ!. ಯಾಕ್ಹೀಗೆ ಆಗ್ತಿದೆ. ಒಂದ್ವೇಳೇ ಈ ನಾರಾಯಣಯ್ಯನೆ ನನ್ನ ಹುಟ್ಟಿಗೆ ಕಾರಣವಾಗಿರಬಹುದಾ ? ನನ್ನಮ್ಮ ತುಂಬಿದ ಬಸುರಿ ದೋಣಿ ಗಂಡಿಯಲ್ಲಿ ಬಿದ್ದಿದ್ದಳೆಂದು ಕರಿಯ ತಂದು ನಗರದ ಆಸ್ಪತ್ರೆಗೆ ಸೇರಿಸಿದ್ದೆಂದು ಥಂಡಿ ಹತ್ತಿದ ಅಮ್ಮ ನನ್ನನ್ನು ಹೆತ್ತು ಸತ್ತಳೆಂದು ಅಜ್ಜಿ ಹೇಳಿದ್ದರಲ್ಲ. ಈ ದೋಣಿಗಂಡಿಯಲ್ಲಿ ಅಮ್ಮ ಬಿದ್ದಿರಬೇಕಾದ್ರೆ ಒಂದೇ ಊಸರವಳ್ಳಿಗೆ ಹೋಗುವವಳಿರಬೇಕು. ಇಲ್ಲಾ ಅಲ್ಲಿಂದ ನಗರಕ್ಕೆ ಹೊರಟವಳಾಗಿರಬೇಕು. ಕರಿಯನನ್ನೇ ಕೇಳ್ಬೇಕು. ಪಂಚೆಗೆ ಕೆಸ್ರು ಹಿಡ್ದರೆ ನೀರ್ಗಚ್ಚೆಯಾಗಿ ಕಲೆ ಉಳಿಯುತ್ತದೆಂದು ಮುಂಜಾಗ್ರತೆ ವಹಿಸುವ ನಾರಾಯಣಯ್ಯನೇ ನನ್ನ ತಂದೆಯಾಗಿದ್ದರೇ...? ಕೇಳುವುದು ಹೇಗೆ ? ಇನ್ನೂ ಎಷ್ಟು ದಿನವಿರ್ಬೇಕೋ ಏನೋ ?" ಅವಿನಾಶ ಎಲ್ಲಾ ಕಡೆ ಸುತ್ತಾಡಿದವನು ದನದ ಕೊಟ್ಟಿಗೆ ಹತ್ರಕ್ಕೆ ಬಂದವನು ಅಲ್ಲಿ ನಡೆಯುತ್ತಿದ್ದ ಗುಸು ಪಿಸು ಮಾತಿಗೆ ಕಿವಿ ತೆರೆದ.

"ಕರಿಯಾ, ನಮ್ಮ ನಾರಾಯಣಯ್ಯನ ಮೊದ್ಲ ಹೆಂಡ್ತಿ ಸಾವಿತ್ರಮ್ಮಂಗೆ ಬಹಳ ವರ್ಷ ಮಕ್ಕಳಾಗ್ದೆ ಬಸುರಿಯಾದಾಗ ಊರವರೆಲ್ಲ ಅದೇನೇನೋ ಆಡ್ಕೊಂಡು ನಕ್ಕರೆಂದು ಒಂದಿನ ಹೇಳ್ದೆ... ಕೇಳ್ದೆ ಆಶ್ಲೇಷಾದ ಮಳೆಯಲ್ಲಿಯ ಮನೆ ಬಿಟ್ಟು ಹೋಗಿದರಂತಲ್ಲ. ನೀನ್ತಾನೆ ಅಮ್ಮನ್ನ ಆಸ್ಪತ್ರೆಗೆ ಸೇರಿಸಿದ್ದು? ಅಲ್ಲಿ ಅವರೇನಾದ್ರೂ, ಮಗುವೇನಾಯ್ತು ? ಒಂದೂ ತಿಳಿಯಲಿಲ್ಲವಂತೆ ಹೌದಾ? ಈ ಹೊಸಬನ್ನು ನೋಡಿದ್ರೆ ಅವರ ಮಗ್ನೆ ಇರ್ಬೇಕೆಂದು ಅನ್ನಿಸ್ತಿದೆ. ಆ ಕೆನ್ನೆ ಮೂಗಿನ ಲಕ್ಷಣವೆಲ್ಲ ಹಾಗೆ ಇದೆಯಲ್ಲಾ ?"

"ನಿಂಗ, ನಿನ್ನ ಕೆಲ್ಸ ದನಗಳನ್ನು ನೋಡ್ಕೊಳ್ಳುವುದು. ಅಷ್ಟು ಮಾಡು ಸಾಕು. ಅದರ ಹಲ್ಲು ಎಣಿಸಲು ಹೋಗ್ಬೇಡಾ? ಇವರ ಮನೆಯನ್ನು ತಿಂದ್ಕೊಂಡು ಇವರನ್ನೇ ಹೇಳುವುದಾ? ಸಾವಿತ್ರಮ್ಮನನ್ನು ಆಸ್ಪತ್ರೆಗೆ ಸೇರಿಸಿದ್ದು ನಿಜ. ಅದ್ನೆ ದೊಡ್ಡದು ಮಾಡ್ಬೇಡಾ ? ಅಯ್ಯಾ ಊರಾಗಿದ್ದಿದ್ರೆ ಆ ಯಮ್ಮ ಯಾಕೆ ದೋಣಿ ಗಂಡಿಯಲ್ಲಿ ಬಿದ್ದಿರ್ಬೇಕಿತ್ತು ? ಎಲ್ಲಾ ಕರಾಮತ್ತು ಗೋಪಯ್ಯನದು. ಸಾಲಾಗಿ ಮಕ್ಕಳನ್ನು ಹುಟ್ಟಿಸುವುದು ಅವರ ಕೆಲಸ. ಅವುಗಳ ಹೊಟ್ಟೆ ತುಂಬಿಸಲು ಹೀಗೇನಾದ್ರೂ ಮಾಡಿ ಬೇರೊಬ್ರ ಬಾಳ್ಗೆ ಬೆಂಕಿಯಿಕ್ಕಿ ಅದರ ಶಾಖದಲ್ಲಿ ಮೈ ಕೈ ಕಾಯ್ಸಿಕೊಳ್ತಾರಷ್ಟೆ. ಅವಿನಾಶ ಇಲ್ಲೇ ಇದ್ದಿದ್ರೆ ನಾರಾಯಣಯ್ಯನಿಗೆ ಬಲ ಬರ್ತಿತ್ತು.

ಆದ್ರೆ ನಗ್ರದಲ್ಲಿ ಬೆಳ್ದ ಹುಡ್ಗ. ಏನ್ಕತೆಯೋ ? ಏನೋ ? ಎಲ್ಲಾ ಎಂಟಾಣೆ ಕೈಗಿಟ್ರೆ ಈಯಪ್ಪ ಹತ್ತೂ ಕೈಗಿತ್ತ. ಆವಾಗ್ಲೆ ಅನ್ನಿಸಿತು ಎಲ್ಲ ಸಾವಿತ್ರಿಯಮ್ಮನದೆ ಗುಣ ಎಂದು.  ಈಗಿನ ವೈದೇಹಿಯಮ್ಮ ಕೂಡಾ ಒಳ್ಳೆಯವರೇ. ಯಾರು ಎಷ್ಟೊತ್ತಿನಲ್ಲಿ ಬಂದ್ರೂ ಗೊಣಗುವುದಿಲ್ಲ" ಕರಿಯ ಚಕ್ಕೆಯನ್ನು ಕೂಡಿಡುತ್ತ ಹೇಳ್ತಿದ್ದ.

"ಹುಟ್ಟು ಸಿಕ್ತು. ಇನ್ನು ದೋಣಿ ನಡೆಸುವುದಕ್ಕೆ ಶುರು ಮಾಡ್ಬೇಡ. ಅದ್ಕೆ ಮೊದಲು ದೋಣಿ ಗಂಡಿ ಹುಡ್ಕಿ ತೇಪೆಯನ್ನೆಲ್ಲ ಮೆತ್ತಿ ಮುಚ್ಚಿ, ಗೋಪಯ್ಯನಂತಹವರನ್ನು ಕೂಡಾ ದಾಟಿಸುವಷ್ಟು ಗಟ್ಟಿತನ ಪಡೆಯಬೇಕು. ನಾಳೆ ಮಳೆ ಬಿಟ್ರೆ ಮರಳಿ ಊರಿನತ್ತ ಪಯಣಿಸಿ ಕರಿಯನೊಂದಿಗೆ ಮಾತಾಡ್ತ ಎಲ್ಲ ತಿಳ್ಕೊಂಡು ಭದ್ರ ತಳವೂರಬೇಕು" ನಿರ್ಧಾರ ಗಟ್ಟಿಯಾಗತೊಡಗಿದಾಗ ಅವಿನಾಶ ತನ್ನೊಳಗೆ ನಕ್ಕ.

ಮರುದಿನ ಮಳೆ ಕಡ್ಮೆಯಾಗಿ ನೆರೆ ನೀರು ಇಳಿದಿದ್ದರಿಂದ ಕರಿಯ ಈ ದಡದಿಂದ ಆ ದಡಕ್ಕೆ ದೋಣಿಯನ್ನು ನಡೆಸತೊಡಗಿದಾಗ ಬೇರೆ ಯಾರಿಲ್ಲದೆ ಅವಿನಾಶನೊಬ್ನೆ ಇದ್ದ. ಕರಿಯ ಹೇಳತೊಡಗಿದ. ಇವ ಆಲಿಸಿದ. ದೋಣಿ ನಿರ್ದಿಷ್ಟವಾದ ಸ್ಥಳ ತಲುಪಲು ವೇಗವಾಗಿ ಚಲಿಸುತ್ತಲಿತ್ತು.

---

# ...ಅವಿಸ್ಮರಣೀಯ ಕ್ಷಣಗಳು

ಜೀವನದಲ್ಲಿ ಎಲ್ಲ ಪರಿಸ್ಥಿತಿಯ್ನೂ ಸರಿದೂಗಿಸಿಕೊಂಡು, ಎಲ್ಲವನ್ನೂ ಸಹಿಸಿಕೊಂಡು, ಎಲ್ಲಾ ರೀತಿಯ ಕಷ್ಟಗಳನ್ನು ನುಂಗಿಕೊಂಡು, ಮಕ್ಕಳಿಗೆ ಅದರ ಲವಲೇಶದ ಸುಳಿವೂ ತಿಳಿಯದಂತೆ, ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಲು ಎಷ್ಟು ಸೆಣಸಾಡಿರಬಹುದು ಎಂದು.

ಇವೆಲ್ಲವನ್ನೂ ತಾನೇ ನುಂಗಿಕೊಂಡು, ಹೂನಗೆಯೊಂದಿಗೆ ಭಾವಚಿತ್ರದಲ್ಲಿ ಇರುವಂತೆಯೇ ಹೊರಗೆ ಎಲ್ಲರಿಗೂ ಕಾಯುತ್ತಿದ್ದರು. ಸ್ವಲ್ಪ ಸ್ಟ್ರಿಕ್ಟ್ ಎಂದೇ ಹೇಳಬಹುದಾದ ವ್ಯಕ್ತಿತ್ವದ ಪತಿದೇವರಿಗೆ ರಾತ್ರಿ ಎಂಟು ಗಂಟೆಗೆ ಸರಿಯಾಗಿ ಎಲ್ಲಿದ್ದರೂ ಮನೆಗೆ ಹಿಂತಿರುಗಿ ಹೋಗಿ, ಅವರ ಇಚ್ಛೆಯಂತೆ ಎಲ್ಲಾ ಖಾದ್ಯಗಳನ್ನು ಬೇರೆ ಬೇರೆ ಬಟ್ಟಲುಗಳಲ್ಲಿ ಇಟ್ಟು ತಟ್ಟೆಯೆಲ್ಲ ಜೋಡಿಸಿಕೊಡುತ್ತಿದ್ದುದು ನನಗೆ 'ಸಿಂಡ್ರೆಲ್ಲಾ' ಕಥೆಯಲ್ಲಿ ಅವಳಿಗೆ ಎಲ್ಲಿದ್ದರೂ ರಾತ್ರಿ 12 ಗಂಟೆಗೆ ಹಿಂದಿರುಗಬೇಕೆಂದು ತಾಕೀತು ಮಾಡಿದ್ದು ನೆನಪಿಗೆ ತರಿಸಿತ್ತು. ಆದರೂ ಆ ಮಹಾತಾಯಿ ಇದರ ಬಗ್ಗೆ ಯಾವತ್ತೂ ಬೇಸರ ವ್ಯಕ್ತಪಡಿಸಿರಲಿಲ್ಲ.

ಅವರ ಸರಳ ಜೀವನಕ್ಕೆ, ಈ ರೀತಿ ಸಮಾರಂಭ ಮಾಡಿ ಅವರ ನೆನಪುಗಳನ್ನು ಕುಟುಂಬದ ಸದಸ್ಯರು ಹಂಚಿಕೊಂಡಿದ್ದು ಇಂದಿನ ನ್ಯೂಕ್ಲಿಯರ್ ಫ್ಯಾಮಿಲಿಗೆ ಆದರ್ಶನೀಯವಾಗಿದೆ. ಇದಕ್ಕೆ ಹೊರದೇಶದಲ್ಲಿರುವ ಪ್ರತಿಭಾವಂತ ಮುದ್ದು ಮೊಮ್ಮಕ್ಕಳ ಸಹಾಯವೂ ಇತ್ತು ಎಂಬುದು ಮರೆಯುವಂತಿಲ್ಲ.

ಇವತ್ತಿನ ಸಮಾರಂಭದ ಬಗ್ಗೆ ಬರೆದು ಕಳಿಸು ಎಂದು ನನ್ನ ಆತ್ಮೀಯ ಗೆಳತಿ ಕೇಳಿದಾಗ ಎಷ್ಟೋ ವರ್ಷದಿಂದ ಕನ್ನಡದಲ್ಲಿ ಏನನ್ನೂ ಬರೆಯದ ನನಗೆ ಒಂದು ಸವಾಲು ಎಸೆದಂತೆ ಭಾಸವಾಯಿತು. ವಾಪಸ್ಸು ಊರಿಗೆ ಹೋಗಿ ನಮ್ಮ ಯಾಂತ್ರಿಕ ಜೀವನದಲ್ಲಿ ಕಳೆದು ಹೋಗುವ ಮೊದಲು ಈ ಟಾಸ್ಕ್ ಅನ್ನು ಮಾಡಿಯೇ ಮುಗಿಸಬೇಕೆಂಬ ಛಲದಲ್ಲಿ ರುಚಿಯಾದ ಊಟ ಮಾಡಿ ಹೊಟ್ಟೆ ಭಾರದಿಂದ ಕಣ್ಣು ಮುಚ್ಚುತ್ತಿದ್ದರೂ ಹಠದಿಂದ ಬರೆಯಲು ಕುಳಿತೆ.

ನನ್ನ ಅನಿಸಿಕೆಯನ್ನು ಬರವಣಿಗೆಯ ರೂಪದಲ್ಲಿ ಹೊರಹಾಕುತ್ತಿದ್ದೇನೆ. ಇದರಿಂದ ಈಗಿನ ತಲೆಮಾರಿನವರಿಗೆ ಸ್ವಲ್ಪವಾದರೂ ಸ್ಫೂರ್ತಿ ಸಿಕ್ಕರೆ ನನ್ನ ಬರವಣಿಗೆಯ ಪ್ರಯತ್ನಕ್ಕೆ ಒಂದು ಅರ್ಥ ಸಿಕ್ಕಂತೆ ಆಗುತ್ತದೆ.

ಈ ಸಮಾರಂಭದ ಅಚ್ಚುಕಟ್ಟುತನ, ಕುಟುಂಬದ ಎಲ್ಲಾ ಸದಸ್ಯರನ್ನೂ ಒಟ್ಟುಗೂಡಿಸಿ, ಸಮಾರಂಭದ ಪಾಲ್ಗೊಳ್ಳುವಿಕೆಯಲ್ಲಿ, ತಾರತಮ್ಯವಿಲ್ಲದೆ ಭಾಗವಹಿಸುವಂತೆ ವಹಿಸಿದ್ದ ಜವಾಬ್ದಾರಿ, ಆಯೋಜಿಸಿದ ರೀತಿ, ಮೊಮ್ಮಕ್ಕಳು, ಮರಿಮಕ್ಕಳನ್ನೂ ಅವರ ವಿದ್ಯೆಗೆ ಪುರಸ್ಕರಿಸಿದ ರೀತಿ, ಬಂದ ಅತಿಥಿಗಳನ್ನು ಆದರದಿಂದ ಉಪಚರಿಸಿದ ರೀತಿ, ಇವೆಲ್ಲದರ ಮೂಲ ಶಕ್ತಿ, ಪ್ರೇರಣೆ ಎನ್ನಬಹುದಾದ ಲತಾಳ ವಿನಯವಾದ ಸವಿನಯದ ಕಾರ್ಯಕ್ರಮವನ್ನು ಪ್ರಾಯೋಜಿಸಿದ ರೀತಿಯಿಂದ ನನ್ನ ಗೆಳತಿಯ ಸ್ಥಾನ ನನ್ನ ಹೃದಯದಲ್ಲಿ ಇನ್ನೂ ಮೇಲೇರಿತು.

■

# ಮಹಿಳೆಯರಲ್ಲಿ Rh ನೆಗೆಟಿವ್ ರಕ್ತದಿಂದಾಗುವ ತೊಂದರೆ

ನಾವು ಬದುಕಿರಬೇಕಾದರೆ ನಮ್ಮ ದೇಹದಲ್ಲಿ ಹರಿಯುತ್ತಿರುವ ರಕ್ತ ತನ್ನ ಕಾರ್ಯ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕು. ರಕ್ತವನ್ನು ದೇಹದ ಜೀವನದಿ ಎನ್ನುತ್ತಾರೆ. ರಕ್ತ ದೇಹದಲ್ಲಿ ನಿರಂತರವಾಗಿ ಹರಿಯುವಷ್ಟು ದಿನ ನಾವು ಬದುಕಿರುತ್ತೇವೆ. ಯಾವಾಗ ನಮ್ಮ ದೇಹದಲ್ಲಿ ರಕ್ತ ತನ್ನ ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸುತ್ತದೆಯೋ ಅಲ್ಲಿಗೆ ನಮ್ಮ ಬದುಕಿಗೆ ಮುಕ್ತಾಯ.

ರಕ್ತದಲ್ಲಿ ಶೇಕಡ 80ರಷ್ಟು ನೀರಿನಂಶ ಮತ್ತು ಶೇಕಡಾ 20ರಷ್ಟು ರಕ್ತ ಕಣಗಳು ಮತ್ತು ಪ್ಲಾಸ್ಮಾ ಹಾಗೆಯೇ ಪ್ಲೇಟ್‌ಲೆಟ್‌ಗಳಿಂದ ಕೂಡಿರುತ್ತದೆ. ರಕ್ತವು ಶರೀರದ ಎಲ್ಲಾ ಅಂಗಗಳಿಗೂ ಬೇಕಾದ ಆಮ್ಲಜನಕ ಪೌಷ್ಠಿಕಾಂಶವು ಹಾಗು ಗ್ಲೂಕೋಸನ್ನು ಒದಗಿಸಿ ಹಾಗೆಯೇ ದೇಹಕ್ಕೆ ಬೇಡವಾದ ವಸ್ತುಗಳನ್ನು ಅಂಗಾಂಶಗಳಿಂದ ಪಡೆದು ಮೂತ್ರಪಿಂಡ, ಶ್ವಾಸಕೋಶ ಹಾಗೂ ಕರುಳಿನ ಮುಖಾಂತರ ದೇಹದಿಂದ ಹೊರಗೆ ದೂಡುತ್ತದೆ. ದೇಹದ ಉಷ್ಣತೆಯನ್ನು $37^0$ಸಿ ಯಲ್ಲಿ ಇರುವಂತೆ ಕಾಪಾಡುತ್ತದೆ.

ಪ್ರತಿಯೊಬ್ಬರಿಗೂ ಒಂದು ರಕ್ತದ ಗುಂಪು ಇರುತ್ತದೆ. ರಕ್ತದಲ್ಲಿ ನಾಲ್ಕು ವಿಧವಾದ ರಕ್ತದ ಗುಂಪುಗಳಿವೆ. ಅವುಗಳೆಂದರೆ :

1. ಎ ರಕ್ತದ ಗುಂಪು
2. ಬಿ ರಕ್ತದ ಗುಂಪು
3. ಸಿ ರಕ್ತದ ಗುಂಪು
4. ಓ ರಕ್ತದ ಗುಂಪು

ಈ ನಾಲ್ಕು ಗುಂಪಿನಲ್ಲಿ 'ಎ' ಗುಂಪಿನವರು 'ಎ' ಗುಂಪಿನವರಿಗೆ ಮಾತ್ರ ರಕ್ತವನ್ನು ದಾನ ಮಾಡಬಹುದು ಮತ್ತು ಸ್ವೀಕರಿಸಬಹುದಾಗಿದೆ. 'ಬಿ' ಗುಂಪಿನವರು 'ಬಿ' ಗುಂಪಿನವರಿಗೆ ಮಾತ್ರ ರಕ್ತವನ್ನು ದಾನ ಮಾಡಬಹುದು. ಹಾಗೆಯೇ 'ಬಿ' ಗುಂಪಿನವರಿಂದ ಮಾತ್ರ ರಕ್ತವನ್ನು ಸ್ವೀಕರಿಸಬಹುದಾಗಿದೆ. 'ಎಬಿ' ಗುಂಪಿನವರು ಎಲ್ಲಾ ಗುಂಪಿನ ರಕ್ತವನ್ನು ಸ್ವೀಕರಿಸಬಹುದು. ಆದರೆ ಅವರ ರಕ್ತ 'ಎಬಿ' ಗುಂಪಿನವರಿಗೆ ಮಾತ್ರ ಚಲಾಯಿಸಲು ಸಾಧ್ಯ. ಅದಕ್ಕಾಗಿ 'ಎಬಿ' ಗುಂಪಿನವರನ್ನು Universal Recipient ಎಂದು ಕರೆಯುತ್ತಾರೆ. ಆದರೆ 'ಓ' ಗುಂಪಿನವರು ಎಲ್ಲಾ ಗುಂಪಿನವರಿಗೂ ರಕ್ತ ನೀಡಬಹುದು. ಅವರಿಗೆ ಅವರ ಗುಂಪಿನ ರಕ್ತ ಮಾತ್ರ ಚಲಾಯಿಸಲು ಸಾಧ್ಯವಾಗುತ್ತದೆ. ಇದಕ್ಕಾಗಿ 'ಓ' ಗುಂಪಿನವರನ್ನು Universal Donor ಎಂದು ಕರೆಯುತ್ತಾರೆ. ಇದಕ್ಕೆಲ್ಲ ಕಾರಣ ರಕ್ತದಲ್ಲಿರುವ ಆ್ಯಂಟಿಜನ್ – ಆ್ಯಂಟಿಬಾಡೀಸ್‌ಗಳು. ಹಾಗೆಯೇ ಈ ನಾಲ್ಕು ರಕ್ತದ ಗುಂಪಿನಲ್ಲಿ Rh ಎಂಬ ಅಂಶವಿದೆ. ಇದು ಒಂದು ಪ್ರೋಟೀನ್ ಕಣವಾಗಿದೆ. ಶೇಕಡಾ 90 ರಷ್ಟು ಜನರ ಕೆಂಪು ರಕ್ತ ಕಣಗಳು Rh ಎಂಬ ಅಂಶವನ್ನು ಹೊಂದಿರುತ್ತದೆ. Rh ಅಂಶವನ್ನು ಮೊದಲು ಬಾರಿಗೆ Rheses ಎಂಬ ಜಾತಿಗೆ ಸೇರಿದ ಕೋಲೆಯಲ್ಲಿ ಕಂಡುಹಿಡಿಯಲಾಯಿತು. ಈ Rh ಅಂಶವಿರುವ ರಕ್ತಕಣಗಳಿರುವವರನ್ನು Rh ನೆಗೆಟಿವ್ ಎಂದೂ ಕರೆಯುತ್ತಾರೆ. Rh ಪಾಸಿಟಿವ್ ರಕ್ತದ ಗುಂಪಿನವರು ಅದೇ ಗುಂಪಿನವರಿಗೆ ಮಾತ್ರ ರಕ್ತ ಕೊಡಬಹುದು. ಆದರೆ ಅವರು ಪಾಸಿಟಿವ್ ಮತ್ತು ನೆಗೆಟಿವ್ ಇಬ್ಬರಿಂದಲೂ ರಕ್ತ ಸ್ವೀಕರಿಬಹುದು. ಇನ್ನು Rh ನೆಗೆಟಿವ್ ರಕ್ತದ ಗುಂಪಿರುವವರು Rh ನೆಗೆಟಿವ್ ಗ್ರೂಪಿನವರಿಂದ ಮಾತ್ರ ತೆಗೆದುಕೊಳ್ಳಬಹುದು. Rh ಪಾಸಿಟಿವ್‌ನವರ ರಕ್ತ ಅವರಿಗೆ ಹೊಂದಾಣಿಕೆಯಾಗುವುದಿಲ್ಲ.

ಹೀಗೆ ಮೇಲಿನ ಈ ನಾಲ್ಕು ರಕ್ತದ ಗುಂಪಿನಲ್ಲಿ ಪಾಸಿಟಿವ್ ಮತ್ತು ನೆಗೆಟಿವ್ ಎಂಬ ಎರಡು ವಿಧಗಳಿವೆ. ಹೀಗಾಗಿ ಒಟ್ಟು ಎಂಟು ರೀತಿಯ ರಕ್ತದ ಗುಂಪುಗಳನ್ನು ನಾವು ಕಾಣಬಹುದು. ಅವುಗಳೆಂದರೆ :


1. A Rh Positive
2. A Rh Negetive
3. B Rh Positive
4. B Rh Negetive
5. O Rh Positive
6. O Rh Negetive
7. AB Rh Positive
8. AB Rh Negetive

ರಕ್ತದ ಗುಂಪುಗಳು ಮತ್ತು Rh ನ ಕಣಗಳು ತಂದೆ ತಾಯಿಗಳಿಂದ ಮಕ್ಕಳಿಗೆ ಬರುತ್ತದೆ. ಇದೇ ವಿಶ್ವದಲ್ಲಿ ಶೇಕಡಾ 84ರಷ್ಟು ಜನರು Rh ಪಾಸಿಟಿವ್ ಅಂಶವನ್ನು ಮತ್ತು ಶೇಕಡಾ 16 ರಷ್ಟು ಜನರು Rh ನೆಗೆಟಿವ್ ಅಂಶವನ್ನು ಹೊಂದಿರುತ್ತಾರೆ.

**✍ ಶಾರದಾ ಎ. ಅಂಚನ್**

ನಮ್ಮ ಭಾರತದಲ್ಲಿ ಶೇ. 95ರಷ್ಟು Rh ಪಾಸಿಟಿವ್ ಗುಂಪಿನವರು ಮತ್ತು ಶೇ. 5 ರಷ್ಟು Rh ನೆಗೆಟಿವ್ ಅಂಶವನ್ನು ಹೊಂದಿರುತ್ತಾರೆ. Rh ನೆಗೆಟಿವ್ ಇರುವವರು ನಮ್ಮ ದೇಶದಲ್ಲಿ ಕಡಿಮೆ ಇರುವುದರಿಂದ ರೋಗಿಗೆ Rh ನೆಗೆಟಿವ್ ರಕ್ತದ ಅಗತ್ಯ ಬಿದ್ದಾಗ ಹೊಂದಿಸಿಕೊಡುವುದು ಬಹಳ ತ್ರಾಸದಾಯಕವಾಗುತ್ತದೆ. Rh ಅಂಶದಿಂದ ಪ್ರಥಮವಾಗಿ ತೊಂದರೆಗೊಳಪಡುವುದು ಮಹಿಳೆ ಅದರಲ್ಲೂ ಗರ್ಭಿಣಿ ಸ್ತ್ರೀ Rh ನೆಗೆಟಿವ್ ಅಂಶ ಹೊಂದಿರುವ ಮಹಿಳೆಯು Rh ಪಾಸಿಟಿವ್ ಅಂಶವಿರುವ ಮಗುವಿಗೆ ಜನ್ಮ ಕೊಟ್ಟಾಗ ತೊಂದರೆಯಾಗುತ್ತದೆ. ಆದರೆ Rh ನೆಗೆಟಿವ್ ಅಂಶವಿರುವ ಗರ್ಭಿಣಿ ಸ್ತ್ರೀ Rh ನೆಗೆಟಿವ್ ಅಂಶವಿರುತವ ಮಗುವಿಗೆ ಜನ್ಮ ಕೊಟ್ಟಾಗ ಮಾತ್ರ ಯಾವುದೇ ತೊಂದರೆ ಕಂಡು ಬರುವುದಿಲ್ಲ.

Rh ನೆಗೆಟಿವ್ ತೊಂದರೆಗೆ ಕಾರಣವೇನೆಂದರೆ Rh ನೆಗೆಟಿವ್ ಮಹಿಳೆಯ ಗರ್ಭದಲ್ಲಿ Rh ಪಾಸಿಟಿವ್ ಅಂಶವಿರುವ ಮಗು ಮೊಳೆಯುತ್ತಿದ್ದರೆ ಆ ಮಗುವಿನ Rh ಪಾಸಿಟಿವ್ ರಕ್ತ ಕಣಗಳು ಪ್ರಸವದ ಸಮಯದಲ್ಲಿ ತಾಯಿಯ ನೆಗೆಟಿವ್ ರಕ್ತ ಕಣಗಳೊಂದಿಗೆ ಸೇರಿಕೊಳ್ಳುತ್ತದೆ. ಆಗ ತಾಯಿಯಲ್ಲಿರುವ 'ಆ್ಯಂಟಿಜನ್' ಎಂಬ ಪ್ರತಿಕಾರಕ ರಕ್ತ ಕಣಗಳು ಮಗುವಿನ Rh ಪಾಸಿಟಿವ್ ರಕ್ತಕಣಗಳನ್ನು ಆ್ಯಂಟಿಬಾಡಿಗಳೆಂದು ತಿಳಿದು ತಾಯಿಯಲ್ಲಿರುವ ಆ್ಯಂಟಿಜನ್ ಮಗುವಿನ ರಕ್ತ ಕಣಗಳ ವಿರುದ್ಧವಾಗಿ ಆ್ಯಂಟಿಬಾಡಿಯನ್ನು ಉತ್ಪಾದನೆ ಮಾಡುತ್ತದೆ. ಐದು Rh ತೊಂದರೆಗೆ ಪ್ರಮುಖ ಕಾರಣವಾಗುತ್ತದೆ. Rh ನೆಗೆಟಿವ್ ರಕ್ತದ

**ಅಸೋಸಿಯೇಶನ್‌ನ ಎಲ್ಲಾ ಸದಸ್ಯರುಗಳಿಗೆ,**

**ದೀಪಾವಳಿ ಹಬ್ಬದ**

**ಹಾರ್ದಿಕ ಶುಭಾಶಯಗಳು.**

**ಮೈಸೂರು ಅಸೋಸಿಯೇಶನ್**

ತಾಯಿಗೆ Rh ಪಾಸಿಟಿವ್ ಮಗು ಗರ್ಭದಲ್ಲಿ ಬೆಳೆಯುತ್ತಿರುವುದು ತಿಳಿದಿರುವುದಿಲ್ಲ. ಆಕೆಗೆ ಯಾವುದೇ ಸೂಚನೆ ಅಥವಾ ತೊಂದರೆಗಳು ಕಂಡುಬರುವುದಿಲ್ಲ. ತೊಂದರೆ ಉಂಟಾಗುವುದು ಭ್ರೂಣಕ್ಕೆ ಅಥವಾ ಮಗುವಿಗೆ Rh ನೆಗೆಟಿವ್ ತೊಂದರೆಯಿಂದ ತಾಯಿಗೆ ಮತ್ತು ಮುಂದೆ ಜನಿಸಲಿರುವ ಮಗುವಿಗೆ ತೊಂದರೆಯುಂಟಾಗುತ್ತದೆ. ಮೊದಲು ಮಗು ಈ ಸಮಸ್ಯೆಯಿಂದ ತಪ್ಪಿಸಿಕೊಳ್ಳುತ್ತದೆ. Rh ನೆಗೆಟಿವ್ ತಾಯಿಯಲ್ಲಿ ಉತ್ಪಾದನೆಗೊಂಡ ಆ್ಯಂಟಿಬಾಡಿಗಳು Rh ಪಾಸಿಟಿವ್ ಮಗುವಿನ ರಕ್ತ ಕಣಗಳೊಂದಿಗೆ ಒಡೆಯತೊಡಗಿ ಮಗುವಿಗೆ ಕಾಮಾಲೆ ರೋಗ ಬರಬಹುದು. ಇದಕ್ಕೆ Hemolytic JaIndice ಎಂದು ಕರೆಯುತ್ತಾರೆ. ತಾಯಿಗೆ ಕೆಲವು ಸಾರಿ ಗರ್ಭ ಪಾತಗಳಾಗಬಹುದು. ಒಂದು ವೇಳೆ Rh ನೆಗೆಟಿವ್ ವ್ಯಕ್ತಿಗೆ Rh ಪಾಸಿಟಿವ್ ರಕ್ತ ಚಲಾಯಿಸಿದರೆ ಈ Rh ನ ತೊಂದರೆ ಉಂಟಾಗುತ್ತದೆ. Rh ನೆಗೆಟಿವ್ ಅಂಶದಿಂದ ಗರ್ಭಿಣಿ ಸ್ತ್ರೀಗೆ ಆಗುವ ತೊಂದರೆಗಳನ್ನು ಈ ತಪಾಸಣಾ ವಿಧದಿಂದ ತಿಳಿದುಕೊಳ್ಳಬಹುದು.

1. ರಕ್ತ ಪರೀಕ್ಷೆಯ ಮೂಲಕ Rh ನೆಗೆಟಿವ್ ಅಂಶವಿರುವ ಗರ್ಭಿಣಿ ಸ್ತ್ರೀಯು ರಕ್ತದಲ್ಲಿ Rh ಪಾಸಿಟಿವ್ Antibodies ಇದೆಯಾ ಎಂದು ತಿಳಿಯಬಹುದು.

2. ಸ್ಕ್ಯಾನಿಂಗ್ ಮುಖಾಂತರ ಗರ್ಭದ ಮಗುವಿಗೇನಾದರೂ ತೊಂದರೆ ಇದೆಯೋ ಎಂದು ತಿಳಿಯಬಹುದು.

3. Amniocentesis ಪರೀಕ್ಷೆಯಿಂದ ಗರ್ಭದ ಸುತ್ತ ಇರುವ ನೀರನ್ನು ತೆಗೆದು ಮಗುವಿನ ಆರೋಗ್ಯ ಪರಿಶೀಲಿಸಬಹುದು.

4. ಗರ್ಭದೊಳಗಿರುವ ಮಗುವಿನ ರಕ್ತವನ್ನು ತೆಗೆದು ಆ ಮಗುವಿನ ರಕ್ತದ ಗುಂನ್ನು ಮೊದಲೇ ತಿಳಿಯಬಹುದು. ಇದರಿಂದ ಮಗುವಿಗೆ ಏನಾದರೂ ತೊಂದರೆಯಾಗಿದೆಯೋ ಎಂದು ತಿಳಿಯಬಹುದು.

5. Antibody Screen ಎಂಬ ಪರೀಕ್ಷೆಯಿಂದ Rh ನೆಗೆಟಿವ್ ರಕ್ತವಿರುವ ಗರ್ಭಿಣಿ ಸ್ತ್ರೀಯ ರಕ್ತದಲ್ಲಿ ಈಗಾಗಲೇ Rh ಪಾಸಿಟಿವ್ ಅಂಶದ ವಿರುದ್ಧ ಕಣಗಳು (Antibodies) ಚಲಿಸುತ್ತಿದೆಯೋ ಎಂಬುದನ್ನು ತಿಳಿದುಕೊಳ್ಳಬಹುದು.

**ಚಿಕಿತ್ಸೆ ಮತ್ತು ಪರಿಹಾರಗಳು :**

1. Rh ನೆಗೆಟಿವ್ ಹೊಂದಿರುವ ಮಹಿಳೆಗೆ Rh immunoglobulin ಎಂಬ ಚುಚ್ಚುಮದ್ದನ್ನು ಗರ್ಭಿಣಿಯಾದಾಗ ಮತ್ತು ಮಗುವಿನ ಜನನವಾದ ನಂತರ ಕೊಡಬೇಕು. ಇದರಿಂದ Rh ನೆಗೆಟಿವ್‌ನಿಂದ ಮಗುವಿಗೆ ಮತ್ತು ತಾಯಿಗೆ ಆಗುವ ತೊಂದರೆಗಳನ್ನು ತಪ್ಪಿಸಬಹುದು.

2. ಒಂದು ವೇಳೆ ತಾಯಿ Rh ನೆಗೆಟಿವ್ ಆಗಿ ಭ್ರೂಣದಲ್ಲಿರುವ ಮಗು Rh ಪಾಸಿಟಿವ್ ಆಗಿದ್ದರೆ ಅವಧಿಗೆ ಮುನ್ನವೇ ಪ್ರಸವ ಮಾಡಿಸುವುದರಿಂದ ಮುಂದೆ ಉಂಟಾಗುವ ತೀವ್ರ ತರದ ತೊಂದರೆಗಳಿಗೆ ಸ್ವಲ್ಪ ಪರಿಹಾರ ಕೊಡಿಸಬಹುದು.

ಪ್ರತಿಯೊಬ್ಬ ಮಹಿಳೆಯೂ ಗರ್ಭಿಣಿಯಾಗುವುದಕ್ಕಿಂತ ಮೊದಲು ತನ್ನ ರಕ್ತದ ಗುಂಪನ್ನು ಪರೀಕ್ಷಿಸಬೇಕು. ಜೊತೆಗೆ ತನ್ನ ಗಂಡನ ರಕ್ತದ ಗುಂಪನ್ನು ಪರೀಕ್ಷಿಸಿಕೊಳ್ಳಬೇಕು. ಮಹಿಳೆ Rh ನೆಗೆಟಿವ್ ಆಗಿ ಆಕೆಯ ಪತಿ Rh ಪಾಸಿಟಿವ್ ಆದರೆ ಮಗು ತಂದೆಯ Rh ಲಕ್ಷಣವನ್ನು ಪಡೆದು ಬಂದಾಗ ತೊಂದರೆಗಳು ಕಂಡುಬರುತ್ತದೆ. ತಂದೆ ತಾಯಿ ಇಬ್ಬರೂ Rh ನೆಗೆಟಿವ್ ಇದ್ದರೆ ಹುಟ್ಟುವ ಮಗುವೂ ನೆಗೆಟಿವ್ ಆಗಿರುತ್ತದೆ. ಆಗ ಈ Rh ಸಮಸ್ಯೆ ಮಗುವಿಗೆ ಕಾಡಲಾರದು. ಒಂದು ವೇಳೆ ಮಹಿಳೆ ತಾನು Rh ನೆಗೆಟಿವ್ ಇದ್ದು ಪತಿ Rh ಪಾಸಿಟಿವ್ ಇದ್ದರೆ ಆಕೆ ಗರ್ಭಿಣಿಯಾಗಿರುವಾಗಲೇ Rh immunoglobulin ಎಂಬ ಇಂಜೆಕ್ಷನ್ ತೆಗೆದುಕೊಳ್ಳುವುದರಿಂದ ಈ Rh ತೊಂದರೆಯನ್ನು ತಡೆಗಟ್ಟಬಹುದು.

ಗರ್ಭಿಣಿ ಮಹಿಳೆಯರು ತಮ್ಮ ರಕ್ತದ ಗುಂಪು ರಕ್ತದ ಹಿಮೋಗ್ಲೋಬಿನ್ ಪ್ರಮಾಣ ಮುಂತಾದವುಗಳನ್ನು ಪ್ರಾರಂಭದ ಹಂತದಲ್ಲಿಯೇ ಪರಿಶೀಲಿಸಿಕೊಳ್ಳುವುದರಿಂದ ಮುಂದೆ ಬರಲಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

# PICNIC

Mysore Association Organizing a one day picnic on Sunday 16th October to KALYANI WATER RESORT near Vajreshwari. Cost per person is Rs. 700/-.

More than one person from a family is Rs. 600/- per person. Children age between 6 years to 18 years Rs. 400/-, Children below 6 years free. Cost includes transport, breakfast, lunch & evening tea. Please make convenient to attend the picnic.

*More Details Contact:*

**Madhusudan** **Shashikanth Joshi**
**9920966497** **9820166274.**

# OBITUARY



We deeply regret to inform all our members that our oldest life member Smt. Sharadamma Narayanaswamy, wife of Late Ex-President B. Narayanaswamy and Mother of Justice B.N. Srikrishna expired suddenly on Sunday, 09th October 2016 at around 10.00 am. We pray that the departed noble soul rests in peace and the family bears the loss with courage and fortitude.

# ಪ್ರತಿಷ್ಠೆ

ಜಿ.ವಿ. ಕಂಚುಗಾರ

ಅಂದು ವಿಠಲ ಜೋಯಿಸರು ಇಂತಹ ಒಂದು ಸಮಾರಂಭಕ್ಕೆ ಆಕಸ್ಮಿಕವಾಗಿ ಮನಸ್ಸು ಮಾಡಿದ್ದು ಏಕಿರಬಹುದು ಅಂತ ಬಹುತೇಕ ಮಂದಿಗೆ ತಿಳಿದುಕೊಳ್ಳಲಾಗಿರಲಿಲ್ಲ. ಜೋಯಿಸರ ಹಿರಿಮಗಳು ರುಕ್ಮಿಣಿ ಹಾಗೂ ಅನಂತರದ ವಿಶಾಲಾಕ್ಷಿ ಕೂಡಾ ತಂದೆಯ ಕಾಗದ ತಲುಪುತ್ತಲೇ ಮಕ್ಕಳನ್ನು ಕಟ್ಟಿಕೊಂಡು ಗಂಡನ ಮನೆಯಿಂದ ಮುಂಚಿನ ರಾತ್ರಿಯೇ ಆತುರಾತುರವಾಗಿ ಬಂದಿದ್ದರೂ; ಅವರಿಗೂ ಕಾರಣ ತಿಳಿದದ್ದು ಇಲ್ಲಿಗೆ ಬಂದ ಮೇಲೆಯೇ. ಸತ್ಯನಾರಾಯಣ ವ್ರತ, ಶಾಂತಿ ಹೋಮ, ಬಂದವರಿಗೆಲ್ಲಾ ಅನ್ನಸಂತರ್ಪಣೆ, ದಕ್ಷಿಣೆ ಅಂತ ಹವಣಿಸಿಕೊಂಡ ಕಾರ್ಯಗಳು ಹಲವಾರು.

ಒಟ್ಟಿನಲ್ಲಿ ವಿಠಲ ಜೋಯಿಸರ ಮನೆಯಲ್ಲಿ ಇವತ್ತು ಸಂಭ್ರಮವೇ ಸಂಭ್ರಮ. ಅಂಗಳದಲ್ಲಿ ಹಾಕಿದ ಭರ್ಜರಿ ಮಂಟಪದಲ್ಲಿ ಜನ ತಂಡೋಪತಂಡವಾಗಿ ಬಂದು ಸೇರುತ್ತಿದ್ದಾರೆ. ಸತ್ಯನಾರಾಯಣ ವ್ರತದ ಹೊಣೆ ಹೊತ್ತ ಉಳ್ಳೂರರು ಏರು ಜಗಲಿಯಲ್ಲಿ ಹರಿಕತೆಗೆ ಪ್ರಾರಂಭಿಸಿದ್ದಾರೆ. ಮಂಟಪದ ಬಲಗಡೆ ರಂಗವಲ್ಲಿ ಹಾಕಿಕೊಂಡು ಸುಮಾರು 20 - 25 ವೈದಿಕ ಬ್ರಾಹ್ಮಣರು ಹೋಮಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ವಾದ್ಯದವರಿಗಾಗಿ ಪ್ರತ್ಯೇಕ ಸ್ಥಳ ಏರ್ಪಡಿಸಲಾಗಿದೆ. ಬಾವಿಕಟ್ಟೆಯ ಹತ್ತಿರ ಕೆಲವಷ್ಟು ಹೆಂಗಸರು ಪಾತ್ರೆ ಪಗಡೆಗಳನ್ನು ತೊಳೆಯುವುದರಲ್ಲಿ ಮಗ್ನರಾಗಿದ್ದರೆ ಮತ್ತೆ ಕೆಲವರು ನೀರಿನ ತೊಟ್ಟಿ ತುಂಬಿಡುವುದರಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಒಳಗಡೆ ಊಟದ ಸಿದ್ಧತೆ ನಡೆಯುತ್ತಿದೆ ಅಂತ ಕಾಣುತ್ತದೆ; ತುಪ್ಪದಲ್ಲಿ ಕರಿಯುವ ತಿಂಡಿಯ ಪರಿಮಳಕ್ಕೆ ಹುಡುಗರು ಮಕ್ಕಳ ಬಾಯಿಯಲ್ಲಿ ನೀರೂರುತ್ತಿದೆ. ಮಲಗದ್ದೆಯಲ್ಲಿ ಈಗಾಗಲೇ ಕೆಲವಿಷ್ಟು ಬೀದಿನಾಯಿಗಳು ತಿಂದುಂಡು ಎಸೆಯುವ ಎಂಜಲೆಲೆಗಾಗಿ ಕಾದು ಕುಳಿತಿದ್ದವು.

ವಿಠಲ ಜೋಯಿಸರು ಜರತಾರಿ ಪೇಟ ಧರಿಸಿಕೊಂಡು ವಿಜೃಂಭಣೆಯಿಂದ ಅತ್ತಿತ್ತ ತಿರುಗುತ್ತಿದ್ದಾರೆ. ಹಿರಿಯ ಮಗ ನರಸಿಂಹನ ಹೆಸರಿನಲ್ಲಿ ಸತ್ಯನಾರಾಯಣ ವ್ರತ ಈಗಷ್ಟೇ ಮುಗಿದಿದ್ದು ಆಹುತಿಯಾದ ಸುಗಂಧ ದ್ರವ್ಯಗಳ ಪರಿಮಳ ಸುತ್ತಲೂ ಹರಡಿ ಆಹ್ಲಾದಕರ ವಾತಾವರಣವನ್ನುಂಟು ಮಾಡಿದೆ. ಬ್ರಾಹ್ಮಣರ ಮಂತ್ರೋಚ್ಛಾರಣೆ ಧ್ವನಿವರ್ಧಕ ಮೂಲಕ ದೂರ ದೂರದ ತನಕ ಕೇಳಿಸುತ್ತಿದೆ.

ಇನ್ನೊಂದು ಕಡೆ ದನದ ಕೊಟ್ಟಿಗೆಯಲ್ಲಿ ಗೋಪೂಜೆಗೆ ಸಿದ್ಧತೆ ನಡೆದಿತ್ತು. ಗೋವುಗಳನ್ನೆಲ್ಲಾ ಕೆರೆಯಲ್ಲಿ ಚೆನ್ನಾಗಿ ಮೈ ತೊಳೆದು ಹೂಹಾರಗಳಿಂದ ಶೃಂಗರಿಸಿ ಗಂಜಿ, ಕಡುಬು, ಹಿಂಡಿ ಅಂತ ಯಥೇಚ್ಛವಾಗಿ ತಿನ್ನಲು ಹಾಕಲಾಗಿತ್ತು. ಸುಬ್ರಾಯ ಭಟ್ಟರ ಸಮ್ಮುಖದಲ್ಲಿ ನರಸಿಂಹ ಗೋವುಗಳಿಗೆ ದೀಪ ತೋರಿಸಿ ಪೂಜಿಸುವ ಕಾರ್ಯದಲ್ಲಿ ತತ್ಪರನಾಗಿದ್ದಾನೆ.

ಊರಿನ ಸಮಸ್ತರೂ ಅಕ್ಕಿ, ತೆಂಗಿನಕಾಯಿ, ತರಕಾರಿ ಅಂತ ಯತಾನುಶಕ್ತಿ ತಂದು ರಾಶಿ ಹಾಕಿದ್ದು ಒಂದು ಕಡೆಯಲ್ಲಿ ಕೊಳೆಯುವ ಹಾಗೆ ಬಿದ್ದುಕೊಂಡಿತ್ತು. ವಿಠಲ ಜೋಯಿಸರು ಯಾರಿಂದಲೂ ಏನನ್ನೂ ಅಪೇಕ್ಷಿಸಿರದಿದ್ದರೂ ಊರವರು ಅವರಾಗಿಯೇ ತಂದು ಹಾಕುವಾಗ ಬೇಡವೆನ್ನದಾಗಿದ್ದರು. ಅಂತೆಯೇ ಅವರು ಬಂದವರಿಗೆ ಆತಿಥ್ಯಕ್ಕೇನೂ ಕಡಿಮೆ ಮಾಡಿರಲಿಲ್ಲ. ಬಂದ ಕೂಡಲೇ ಬೆಲ್ಲನೀರು, ಅದರ ಬೆನ್ನಲ್ಲೇ ಶರಬತ್ತು, ಕೆಲವೊಂದು ಪ್ರತಿಷ್ಠಿತ ವ್ಯಕ್ತಿಗಳಿಗೆ ಶರಬತ್ತಿನ ಬದಲಿಗೆ ಎಳನೀರು, ಆನಂತರ ಊಟ, ಅಷ್ಟು ಮಾತ್ರವಲ್ಲ ಹೊರಡುವ ಮೊದಲು; ಬಡವ ಬಲ್ಲಿದ ಸಣ್ಣವ ದೊಡ್ಡವ ಹೆಂಗಸರು ಗಂಡಸರು ಎಂಬ ಯಾವ ಭೇದಭಾವವೂ ಇಲ್ಲದೆ ಬಂದವರಿಗೆಲ್ಲಾ ಎಲೆ ಅಡಿಕೆ, ಸೇರು ಅಕ್ಕಿ, ತೆಂಗಿನ ಕಾಯಿ, ತುಂಡು ವಸ್ತ್ರ, ಚಿಲ್ಲರೆ ಹಣ ಅಂತ ಭರ್ಜರಿ ದಕ್ಷಿಣೆಯ ವ್ಯವಸ್ಥೆಯಾಗಿತ್ತು. ಒಟ್ಟಿನಲ್ಲಿ ಕಳೆದ 25 ವರ್ಷಗಳಲ್ಲಿ ಇಂತಹ ಒಂದು ಸಂಭ್ರಮದ ಸಮಾರಂಭ ನಡೆದದ್ದಿಲ್ಲ ಅಂತ ಎಲ್ಲರೂ ಹೊಗಳುವವರೇ.

ಮೊದಲ ಪಂಕ್ತಿಯಲ್ಲಿ ಕುಳಿತವರೆಲ್ಲಾ ಊಟ ಮುಗಿಸಿ ಎಲೆ ಅಡಿಕೆ ಮೆಲ್ಲುತ್ತಾ ಹರಟೆ ಹೊಡೆಯಲು ಕುಳಿತ್ತಿದ್ದರು. ಎರಡನೆಯ ಪಂಕ್ತಿಯಲ್ಲಿ ಏರುತ್ತಿರುವ ಜನ ನೋಡಿ ಚಪ್ಪರದಲ್ಲೂ ಎಲೆ ಹಾಕತೊಡಗಿದ್ದರು. ವಿಠಲ ಜೋಯಿಸರ ಹಿರಿಯ ಮಗ ನರಸಿಂಹ ಊಟ ಮುಗಿಸಿ ಕೈ ತೊಳೆಯಲು ಹೊರಗೆ ಬಂದಿದ್ದನಷ್ಟೆ. ಮಿಕ್ಕುಳಿದದ್ದರಲ್ಲಿ ಏನಾದರೂ ಸಿಕ್ಕೀತು ಎಂಬ ದೃಷ್ಟಿಯಿಂದ ಕೊಟ್ಟಿಗೆಗೆ ಚಾಚಿಕೊಂಡು ಕುಳಿತಿದ್ದ ಕೆಲವೊಂದು ಭಿಕ್ಷುಕರತ್ತ ಅವನ ದೃಷ್ಟಿ ಹೋಗುತ್ತದೆ. ಎಲ್ಲಿ ತಡವಾಗುತ್ತದೋ ಅಂತ ಎದುರುಸಿರು ಬಿಡುತ್ತಾ 7-8 ವರ್ಷದ ಹುಡುಗಿಯೊಬ್ಬಳನ್ನು ಆಧಾರವಾಗಿ ಹಿಡಿದುಕೊಂಡು ಓಡುತ್ತೋಡುತ್ತಾ ಬರುವ ಮುದುಕಿಯನ್ನು ನೋಡಿದ ನರಸಿಂಹನಿಗೆ ಕಣ್ಣು ಕತ್ತಲೆ ಬರುತ್ತದೆ. ಇನ್ನೇನು ಬೀಳುತ್ತಾನೆ ಅನ್ನುವಷ್ಟರಲ್ಲಿ ಹಿಂದಿನಿಂದ ಒಂದಿಬ್ಬರು ಆಧರಿಸಿ ಹಿಡಿದುಕೊಳ್ಳುತ್ತಾರೆ.

ಅವನಿಗೆ ಮತ್ತೆ ಎಚ್ಚರವಾದಾಗ ತಾನು ಮಲಗುವ ಕೋಣೆಯಲ್ಲಿ ಮಲಗಿರುವುದು ಅರಿವಿಗೆ ಬರುತ್ತದೆ. ಎದ್ದು ಕುಳಿತುಕೊಳ್ಳಬೇಕೆಂದು ಪ್ರಯತ್ನಪಟ್ಟರೂ ಅವನಿಗೆ ಕುಳಿತುಕೊಳ್ಳಲಾಗುವುದಿಲ್ಲ. ಮನಸ್ಸು ಮಾತ್ರ ನಾಗಾಲೋಟದಲ್ಲಿ ಓಡುತ್ತದೆ. ಅದರ ಹಿಂದೆಯೇ ಕುರುಡು ಭಿಕ್ಷುಕಿಯ ನೆನಪಾಗಿ ಹಿಂದಿನ ಘಟನೆಗಳು ಮರುಕಳಿಸುತ್ತವೆ.

ನರಸಿಂಹನಿಗೆ ಲಾರಿ ಬಿಸಿನೆಸ್ ಮಾಡುವ ಅಗತ್ಯವೇನೂ ಇರಲಿಲ್ಲ. ತಂದೆ ಮಾಡಿಟ್ಟದ್ದು ಸಾಕಷ್ಟಿತ್ತು. ಹಾಗಂತ ಅವನು ಕೈಕಟ್ಟಿ ಕುಳಿತುಕೊಳ್ಳುವ ಜಾಯಮಾನದವನಲ್ಲ. ಅಂತೆಯೇ ತಂದೆಯವರ ಅನುಮತಿ ಮೇರೆಗೆ ಲಾರಿ ಕೊಂಡುಕೊಂಡವ ಅಕ್ಕಿ ಮಿಲ್ ತೆರೆದ. ಯಾರ್‍ಯಾರಿಂದಲೋ ಎಲ್ಲಾ ಭತ್ತ ತಂದು ಅಕ್ಕಿ ಮಾಡಿಕೊಡುವ ಕಾಂಟ್ರ್ಯಾಕ್ಟ್ ಗಿಟ್ಟಿಸಿದ. ಒಮ್ಮೊಮ್ಮೆ ಘಟ್ಟದ ಮೇಲೂ ಲೋಡ್ ಹೊಡೆಯಬೇಕಾದ ಪ್ರಸಂಗ ಬರುತ್ತಿದ್ದುದರಿಂದ ಒಬ್ಬ ಒಳ್ಳೆಯ ಡ್ರೈವರನಿಗಾಗಿ ಹುಡುಕಲು ತೊಡಗಿದ. ಕಾಸರಗೋಡ್ ಕಡೆಯ ಹಸನ್ ಎಂಬವ ಡ್ರೈವರ್ ಆಗಿ ಸಿಕ್ಕಿದ ಮೇಲಂತೂ ನರಸಿಂಹನ ವಹಿವಾಟು ದಿನೇ ದಿನೇ ವೃದ್ಧಿಯಾಯಿತು. ಈ ಮಧ್ಯೆ ಬಿಡುವು ಸಿಕ್ಕಿದ ಹಾಗೆಲ್ಲಾ ನರಸಿಂಹ ಹಸನನ ಮುಖಾಂತರ ತಾನೂ ಡ್ರೈವಿಂಗ್ ಕಲಿತುಕೊಂಡ. ಹಾಗೆ ಕಲಿತುಕೊಂಡದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಗದ್ದೆ ವಿಷಯ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದ್ದು ಅದೊಂದು ದಿನ ಹಸನನಿಗೆ 15 ದಿನದ ಮಟ್ಟಿಗೆ ಊರಿಗೆ ಹೋಗಿ ಬರಬೇಕಾಯಿತು. ಲಾರಿಗೆ ಬಿಡುವಿಲ್ಲದ ಆರ್ಡರ್ಸ್ ಇದ್ದಿದ್ದರೂ ನಿರ್ವಾಹವಿಲ್ಲದೆ ಹಸನನಿಗೆ ಊರಿಗೆ ಹೋಗಲು ಅನುಮತಿ ಕೊಡಲೇಬೇಕಾಯಿತು. ಅಂತೆಯೇ ಇನ್ನೊಬ್ಬ ಸಮರ್ಪಕ ಡ್ರೈವರ್ ದೊರೆಯದಿದ್ದುದರಿಂದ ನರಸಿಂಹ ತಾನೇ ಡ್ರೈವಿಂಗ್ ಕೆಲಸ ವಹಿಸಿಕೊಂಡ.

ಹಗಲೂ ರಾತ್ರಿ ಬಿಡುವಿಲ್ಲದಂತೆ ಲೋಡ್ ಹೊಡೆಯುತ್ತಿದ್ದ ಇವನ ಲಾರಿಯಡಿ ಅದೊಂದು ದಿನ ಇವನ ಅಚಾತುರ್ಯದಿಂದ ಇದೇ ಭಿಕ್ಷುಕಿಯ ಗಂಡ ಜೀವ ತೆತ್ತಿದ್ದ. ರಕ್ತ ಚಿಮ್ಮಂತ ಕುರುಡಿಯ ಮುಖದ ಮೇಲೆ ಹಾರಿದಾಗ ಅವಳು ಅದೆಷ್ಟು ಕೂಗಿಕೊಂಡರೂ ನರಸಿಂಹ ಪ್ರಾಣ ಭಯದಿಂದ ಹಿಂದೆ ತಿರುಗಿ ನೋಡುವ ಸೌಜನ್ಯವೂ ತೋರಿಸದೆ ಭರ್‍ರಂತ ಹಾರಿ ಹೋಗಿದ್ದ! ಲಾರಿ ನಿಲ್ಲಿಸಿ ಮುದುಕಿಗೆ ಒಂದಿಷ್ಟು ಹಣ ಕೊಡಬಹುದಿತ್ತು ಎನಿಸಿದ್ದರೂ ಅವಳು ಅದಕ್ಕೊಪ್ಪದೆ ಚೀರಾಡಿದರೆ ನನಗೆ ಜೈಲುವಾಸವೇ ಗತಿ ಅಂತ ನರಸಿಂಹ ಹಾರಿದ್ದು ಅವನನ್ನು ಹೊರತು ಪಡಿಸಿ ಇನ್ನಾರಿಗೂ ತಿಳಿದಿರಲಿಲ್ಲ. ಅವನ ಒಳ ಮನಸ್ಸಿನಲ್ಲಿ ಏನೋ ಒಂದು ರೀತಿಯ

ಬೇಗುದಿಯಿದ್ದರೂ ಅದನ್ನು ಅವನು ತೋರಗೊಡಲಿಲ್ಲ. ಹಾಗೆಯೇ ದಿನ ಕಳೆದಂತೆ ಆ ಘಟನೆಯನ್ನು ಮರೆತು ಬಿಟ್ಟಿದ್ದ. ಆದರೆ......

ಮೊನ್ನೆ ಹಸನನೊಟ್ಟಿಗೆ ತಾನೂ ಲಾರಿಯಲ್ಲಿ ಸೋಮೇಶ್ವರದತ್ತ ಲೋಡ್ ಹೊಡೆಯುತ್ತಿದ್ದಾಗ ಬಹಳ ಸಮಯದಿಂದ ಸೈಡ್ ಬಿಡದಿದ್ದ ಮುಂದಿನ ಲಾರಿಯೊಂದನ್ನು over take ಮಾಡಬೇಕು ಅಂತ ತಾನು ಡ್ರೈವಿಂಗ್ ಮಾಡುವುದಾಗಿ ತಿಳಿಸಿ ಹಸನನಿಂದ ಸ್ಟೇರಿಂಗನ್ನು ಕಸಿದುಕೊಂಡು ಓವರ್ ಟೇಕ್ ಏನೋ ಮಾಡಿದ್ದ. ಆದರೆ ರಸ್ತೆ ಕ್ರಾಸ್ ಮಾಡುತ್ತಿದ್ದ ದನವೊಂದನ್ನು ಮಾತ್ರ ಉಳಿಸಿಕೊಳ್ಳಲಾಗಿರಲಿಲ್ಲ. ಜೀವ ಹೋಗುವ ಸಂಕಟಕ್ಕೆ ದನ ಅಂಬಾ ಅಂತ ಕೂಗುತ್ತಾ ಅಸುನೀಗುತ್ತಿದ್ದಂತೆಯೇ ಜನ ಜಾತ್ರೆಯಂತೆ ಸೇರಿಯಾಯ್ತು. ನರಸಿಂಹನ ಲಾರಿ 10 ಗಜ ಮುಂದೆ ಹೋಗಿ ಗಚ್ ಅಂತ ನಿಂತಿತು.

ವಿಷಯ ಊರು ತುಂಬಾ ಹರಡಲು ಸಮಯ ತೆಗೆದುಕೊಳ್ಳಲಿಲ್ಲ. ತನ್ನ ಹಾಲು ಕರೆಯುವ ದನ ಲಾರಿಯಡಿ ಸಿಕ್ಕಿ ಸತ್ತದ್ದನ್ನು ಕೇಳಿ ಉಪ್ಪೂರರು ಓಡೋಡಿ ಬಂದರು. ಒಂದ್ಹತ್ತು ಜನರ ಮಧ್ಯಸ್ತಿಕೆಯಲ್ಲಿ ಪಂಚಾಯತಿಕೆ ನಡೆದು ನರಸಿಂಹ ಉಪ್ಪೂರರಿಗೆ ರೂ. 3,000/- ಪರಿಹಾರ ಕೊಡುವುದು ಅಂತ ಮಾತಾಯಿತು. ನರಸಿಂಹ ಅದಕ್ಕೆ ಒಪ್ಪಿದರೂ ಉಪ್ಪೂರರು ಹಣ ತೆಗೆದುಕೊಳ್ಳಲು ಒಪ್ಪಲಿಲ್ಲ. ಇದೊಂದು ಗೋಹತ್ಯೆ. ಹಣ ತೆಗೆದುಕೊಂಡಲ್ಲಿ ಇದನ್ನು ಕೊಂದ ಪಾಪ ತನಗೆ ತಟ್ಟಿದ ಹಾಗೆ ಅಂತ ಬಗೆದ ಉಪ್ಪೂರರು ಏನನ್ನೂ ತೆಗೆದುಕೊಳ್ಳದೆ ನರಸಿಂಹನನ್ನು ಖುಷಿ ಖುಷಿಯಲ್ಲಿ ಬೀಳ್ಕೊಟ್ಟು ಸತ್ತು ಬಿದ್ದಿದ್ದ ದನವನ್ನು ಕೊಂಡು ಹೋಗಲಿಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದರು.

ನರಸಿಂಹ ಮನೆಗೆ ಬಂದವನೇ ತಂದೆಯವರಿಗೆ ವಿಷಯ ತಿಳಿಸಿದ. ಜೋಯಿಸರು ಪಂಚಾಂಗ ತೆರೆದು ನೋಡಿದರು. ನರಸಿಂಹನ ಕಾಲಗತಿ ಚೆನ್ನಾಗಿಲ್ಲ. ಕೆಟ್ಟ ಗಳಿಗೆಯಲ್ಲಿ ದನ ಲಾರಿ ಅಡಿ ಸಿಕ್ಕಿದ್ದರಿಂದ ಶಾಂತಿ ಆಗಬೇಕು. ಹೋಮ ನಡೀಬೇಕು, ಅನ್ನ ಸಂತರ್ಪಣೆ ಮಾಡಬೇಕು. ಅಂತೆಲ್ಲಾ ನಿಶ್ಚಯಿಸಿ ಅದಕ್ಕೆ ಸಿದ್ಧತೆ ನಡೆಸಿದ್ದರು.

ನರಸಿಂಹ ಮಲಗಿದ್ದಲ್ಲೇ ಯೋಚಿಸುತ್ತಿದ್ದ.

ಯಕಶ್ಚಿತ ಒಂದು ದನ ಸತ್ತದ್ದಕ್ಕೆ ಹೋಮ ಅನ್ನಸಂತರ್ಪಣೆ ಅಂತ ಅಲ್ಲ ಸಲ್ಲದ ಖರ್ಚು ಮಾಡುವ ನಮ್ಮಲ್ಲಿ ನಿಜಕ್ಕೂ ಮಾನವೀಯತೆ ಎನ್ನುವುದು ಎಳ್ಳಷ್ಟಾದರೂ ಇದೆಯೇ? ಮುದುಕಿ ಅದರಲ್ಲೂ ಕುರುಡಿ, ತಮ್ಮವರೆಂಬವರಾರೂ ಇಲ್ಲದ ಅನಾಥೆ. ಇವತ್ತು ಅವಳಿಗೆ ಒಂದು ಹಿಡಿ ಅನ್ನಕ್ಕಾಗಿ ಭಿಕ್ಷೆ ಬೇಡುವ ಊರೂರು ಅಲೆದಾಡುವ ಪ್ರಸಂಗ ತಂದೊಡ್ಡಿದವರು ಯಾರು ? ನಾನೇ ಅಲ್ಲವೇ? ಪ್ರತಿಷ್ಠೆಯ ಸೋಗಿನಲ್ಲಿ ಆಡಂಬರದ ಬದುಕಿನಲ್ಲಿ ನಾವು ನಿಜಕ್ಕೂ ಎತ್ತ ಸಾಗುತ್ತಿದ್ದೇವೆ ಎಂಬ ಒಂದಿಷ್ಟು ಚಿಂತೆಯಾದರೂ ನಮಗಿದೆಯೇ? ಗಂಡನೊಂದಿಗೆ ಹಾಯಾಗಿ ಒಂದು ಕಡೆ ನೆಮ್ಮದಿಯಿಂದ ಇರುತ್ತಿದ್ದವಳಿಗೆ ಅಂದು ನನ್ನ ದರ್ಶನ ಯಮದರ್ಶನವಾದದ್ದೇ ಎಲ್ಲವುದಕ್ಕೂ ಮೂಲವಾಯಿತು. ನೋಡುನೋಡುತ್ತಿದ್ದಂತೆಯೇ ಅವಳ ಗಂಡ ನನ್ನ ಲಾರಿ ಅಡಿ ಸಿಕ್ಕಿ ಗತ ಪ್ರಾಣನಾಗಿದ್ದ.

ಆ ಮುದುಕಿಗೆ ತನ್ನಿಂದಾದಷ್ಟು ಸಹಾಯ ಮಾಡದಿದ್ದಲ್ಲಿ ಈ ಹೋಮ, ಈ ಅನ್ನಸಂತರ್ಪಣೆಯೆಲ್ಲಾ ಯಾವ ಪುರುಷಾರ್ಥಕ್ಕಾಗಿ? ಯಾವ ಪ್ರತಿಷ್ಠೆಗಾಗಿ? ಅಂತ ಯೋಚಿಸುತ್ತಿದ್ದಂತೆಯೇ ನರಸಿಂಹನಿಗೆ ಪುನಃ ಭಿಕ್ಷುಕರ ಸಾಲಲ್ಲಿ ನಿಂತಿದ್ದ ಮುದುಕಿಯ ನೆನಪಾಗುತ್ತದೆ. ಅವಳನ್ನು ನೋಡಬೇಕು, ಅವಳನ್ನು ಮಾತನಾಡಿಸಬೇಕು, ಸಾಧ್ಯವಾದಷ್ಟು ಅವಳ ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬ ತವಕದೊಂದಿಗೆ ಓಡೋಡಿ ಹೊರಗೆ ಬರುತ್ತಾನೆ. ಕೊಟ್ಟಿಗೆಯ ಹತ್ತಿರದ ಭಿಕ್ಷುಕರ ಸಾಲು ಬೆಳೆಯುತ್ತಾ ಇರುವುದು ಕಂಡು ಬರುತ್ತದೆ. ಎರಡೆರಡು ಸಲ ಕಣ್ಣಾಡಿಸಿದರೂ ಮುದುಕಿ ಮಾತ್ರ ಕಂಡು ಬರುವುದಿಲ್ಲ.

ನರಸಿಂಹನ ಕಣ್ಣು ಪುನಃ ಮಂಜಾಗತೊಡಗುತ್ತದೆ. ಹೊತ್ತು ನಿಧಾನವಾಗಿ ಕಂತುತ್ತದೆ.

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು

## ವಿದ್ವಾನ್ ಚಿಕ್ಕರಾಮರಾಯರು (ಗಾಯನ ವಿದ್ವಾಂಸರು)

ಚಿಕ್ಕರಾಮರಾಯರು ಜನಿಸಿದ್ದು 1893 ರಲ್ಲಿ. ದಕ್ಷಿಣ ಭಾರತ ಸಂಗೀತ ಕ್ಷೇತ್ರದಲ್ಲಿ ಮೈಸೂರು ತಂಜಾವೂರಿನಷ್ಟೇ ಪ್ರಸಿದ್ಧಿ ಪಡೆದಿದ್ದ ಕಾಲ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತ ಕಾಲದಲಿ ಅವರ ಆಸ್ಥಾನದಲ್ಲಿ ಇಬ್ಬರು ರಾಮರಾಯರಿದ್ದರು. ಇವರ ದೇಹದ ಆಕಾರಕ್ಕೆ ತಕ್ಕಂತೆ ಇವರು ಚಿಕ್ಕ ರಾರಾಯರಾದರು. ಅದೇ ಇವರ ಅನ್ವರ್ಥ ನಾಮವೂ ಆಯಿತು. ಕರಿಗಿರಿರಾಯರು ಇವರ ಸಂಗೀತ ಗುರುಗಳು. ತುಂಬು ಮನ್ನಿನ ಪಾತ್ರಕ್ರಮದಿಂದ ಶಿಷ್ಯನ ಕಂಠ ಸಿರಿ ವಿಜೃಂಭಿಸಿತು. ಬಿಡಾರಂ ಕೃಷ್ಣಪ್ಪನವರ ಮಾರ್ಗದರ್ಶನ್ ಮುಂದಿನ ಗುರು ಭಕ್ತಿ ಸುಬ್ಬಣ್ಣನವರ ಸಂಗೀತ ಪ್ರತಿಭೆ ಇವರನ್ನು ಮಹಾವಿದ್ವಾಂಸರನ್ನಾಗಿ ಮಾಡಿತು. ನಾಲ್ವಡಿ ಕೃಷ್ಣರಾಜ ಒಡೆಯರಾದರೂ ಇವರ ಕಲಾ ಪ್ರೌಢಿಮೆಗೆ ತಲೆದೂಗಿ ಇವರನ್ನು ಆಸ್ಥಾನ ವಿದ್ವಾಂಸ ರನ್ನಾಗಿ ನೇಮಿಸಿದರು.



ಮಿಷನ್ ಸ್ಕೂಲಿನಲ್ಲಿ ಓದು, ಕನ್ನದ ಮುತ್ತು ಇಂಗ್ಲೀಷಿನಲ್ಲಿ ಸ್ವಾವ್ಯ, ನಾಟಕಗಳಲ್ಲಿ ತಮ್ಮ ನಟನಾ ಕೌಶಲ್ಯವನ್ನು ತೋರಿದ್ದಾರೆ. ವಿದ್ವತ್ತಿನ ದುಡಿಮೆ ಮನೆಯಲ್ಲಿ, ಆದರೆ ಕಲೆಯ ಅಭಿವ್ಯಕ್ತಿ ವೇದಿಕೆಯಲ್ಲಿ ಎನ್ನುವುದು ಅವರ ಅಭಿಮತ, ರಾಯರ ಜೀವನ ಸಂಪ್ರದಾಯಬದ್ಧವಾದುದು. ವಿನಯ ಸಂಪನ್ನ, ಯಾರ ತೇಜೋವಧೆ ಮಾಡದಿದ್ದರೂ ತಮ್ಮ ಆತ್ಮ ಗೌರವವನ್ನು ಬಿಟ್ಟು ಕೊಟ್ಟವರಲ್ಲ. ಅಷ್ಟೇ ತೀಕ್ಷ್ಣ ಪ್ರತಿಕ್ರಿಯೆ ಅವರದು. ಪಲ್ಲವಿ ಗಾಯನದಲ್ಲಿ ಹೆಚ್ಚಿನ ಪರಿಶ್ರಮ.

"ಬಾಗಿಲನು ತೆರೆದು ಸೇವೆಯನು ಕೊಡೋ ಹರಿಯೇ" ಹಾಗೂ "ಎಲ್ಲಿರುವೆ ತಂದೆ ಬಾರೋ" ಇದು ಅವರ ಅಚ್ಚುಮೆಚ್ಚು. ತಮ್ಮ ಗುರುಗಳಾದ ಭಕ್ತಿ ಸುಬ್ಬಣ್ಣನವರ ಅಂತಿಮ ದಿನಗಳಲ್ಲಿ ದಿನನಿತ್ಯ ಅವರ ಸೇವೆ ಮಾಡೀದ ಪುಣ್ಯಜೀವಿ.

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ದಿಗ್ಗಜರಾದ ಅರಕೆರೆ ನಾರಾಯಣರಾವ್, ಆರ್.ಆರ್.ಕೇಷವಮೂರ್ತಿ, ಬಿ.ವಿ.ಕೆ.ಶಾಸ್ತ್ರಿ, ಬಿ.ಎನ್.ಶ್ರೀನಿವಾಸನ್, ಎ.ಸುಬ್ಬರಾವ್ ಇವರಿಗೆಲ್ಲ ವಿದ್ಯಾದಾನ ಮಾಡಿದ ವಿಭೂತಿ ಪುರುಷ. 1945 ಜನವರಿ ತಿಂಗಳ 8ರಂದು ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕರಾಳ ದಿನವಾಯಿತು. ಅಂದು ಬೆಳಗುತ್ತಿದ್ದ ಈ ಸಂಗೀತ ಪ್ರತಿಭೆ ಅಸಸ್ತಂಗತವಾಯಿತು. ಆದರೆ ಅವರು ತೋರಿದ ಪ್ರೀತಿ – ವಾತ್ಸಲ್ಯಗಳು ಇಂದಿಗೂ ಜೀವಂತವಾಗಿದೆ. ದೇಹ ನಶ್ವರ – ಆತ್ಮ ಅಮರವೆನ್ನುವಂತಾಯಿತು ಅವರ ಬದುಕು.

ಕೃಪೆ : ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು

ಸಂಗ್ರಹ : ನ. ರಾಜಾರಾವ್

# ಶ್ರೀ ಸಿದ್ಧಿ ಮತ್ತು ಶಿಕ್ಷಕರ ದಿನಾಚರಣೆ

ಸಿದ್ಧಿ ಬುದ್ಧಿಗೆ ಪ್ರಥಮ ಹೆಸರೆ ಗಣಾಧಿಪತಿ. ಮೊದಲ ಪೂಜೆಗೆ ಅಗ್ರಸ್ಥಾನ ಗಳಿಸಿರುವ ಗಣನಾಯಕ, ವಿಘ್ನಗಳ ನಿವಾರಕ ವಿನಾಯಕನ ಹಬ್ಬದ ಆಚರಣೆ, ಮತ್ತು ವಿದ್ಯೆಯನ್ನು ಧಾರೆ ಎರೆಯುವ ಶಿಕ್ಷಕರ ದಿನಾಚರಣೆ (ಸೆಪ್ಟೆಂಬರ್ 5, ರಂದು) ಒಟ್ಟಿಗೆ ಬಂದಿರುವುದು ವಿಶೇಷ ವಿಶಿಷ್ಟವಾಗಿದೆ.

ಡಾ। ಸರ್ವಪಲ್ಲಿ ರಾಧಾಕೃಷ್ಣನ ಜನ್ಮದಿನದ ಅಂಗವಾಗಿ ಆಚರಿಸುವ ಶಿಕ್ಷಕರ ದಿನಾಚರಣೆ ಮಹತ್ವಪೂರ್ಣವಾಗಿದೆ.

ಸ್ವಾತಂತ್ರ್ಯ ಹೋರಾಟಗಾರ ಬಾಲಗಂಗಾಧರ ತಿಲಕರು ಗಣೇಶ ಜಯಂತಿಯನ್ನು ಸಾರ್ವಜನಿಕವಾಗಿ ಆಚರಿಸಲು ಪ್ರಾರಂಭಿಸಿದ ರೂವಾರಿ, ರಾಷ್ಟ್ರ ನಾಯಕರ ನೆನೆಯುವುದರ ಮುಖಾಂತರ ಇಂತಹ ಆಚರಣೆಗಳು ತಮ್ಮದೇ ಆದ ಸಂದೇಶವನ್ನು ಒಳಗೊಂಡಿವೆ.

ಎರಡು ಆಚರಣೆಗಳನ್ನು ಇಡೀ ದೇಶದ ಜನ ಒಟ್ಟಿಗೆ, ಸಡಗರ, ಸಂಭ್ರಮ, ತೃಪ್ತಿ – ಭಾವದಿಂದ ಆಚರಿಸುವ ಈ ದಿನ ಅಭೂತ ಪೂರ್ವವಾದುದು.

T – Tolerance    ಶಿ – ಶಿಸ್ತು
E – Effective    ಕ್ಷ – ಕ್ಷಮೆ
A – Affection    ಕ – ಕರುಣೆ
C – Cheerful
H – Honest
E – Effort
R – Respect

ಇದ್ದಾಗ ಮಾತ್ರ ಆದರ್ಶ ಶಿಕ್ಷಕರಾಗಿ ಮಕ್ಕಳ ಮೇಲೆ ಪ್ರಭಾವ ಬೀರಬಲ್ಲರು. ಭವ್ಯ ಭಾರತದ ಮಕ್ಕಳ ಭವಿಷ್ಯದ ರೂವಾರಿಗಳು, ಸಾಕಾರ ಮೂರ್ತಿಗಳೇ ಶಿಕ್ಷಕರು. ಮಕ್ಕಳು ಒಂದು ಬಿಳಿ ಹಾಳೆಯಿದ್ದ ಹಾಗೆ, ಅದರಲ್ಲಿ ಮೂಡಿಸುವ ಚಿತ್ರದಂತೆ ಅಕ್ಷರಗಳಂತೆ ಮುದ್ರೆ ಹೊತ್ತುವ ಕೆಲಸ ಶಿಕ್ಷಕ ಮಾಡುತ್ತಾನೆ. ರಾಷ್ಟ್ರದ ಒಳ್ಳೆಯ ಪ್ರಜೆಯನ್ನಾಗಿ ಮಾಡಬಲ್ಲ ಶಕ್ತಿ ಶಿಕ್ಷಕರಲ್ಲಿದೆ.

ಒಬ್ಬ ಇಂಜಿನಿಯರ್ ಹಾಕಿದ ಯೋಜನೆಯ ಕಟ್ಟಡ ಸರಿಯಾಗಿರದಿದ್ದರೆ ಬೀಳಿಸಿ ಕಟ್ಟಬಹುದು. ಅದರೆ ಒಬ್ಬ ಆದರ್ಶ ಶಿಕ್ಷಕರ ಒಳ್ಳೆಯ ವಿಚಾರ ಧಾರೆಗಳು ವಿದ್ಯಾರ್ಥಿಗಳ ಮೇಲೆ ಶಾಶ್ವತವಾಗಿ ಬೇರೂರುತ್ತವೆ.

ದೇಶ ಮತ್ತು ಸಮಾಜಕ್ಕೆ ಒಳ್ಳೆಯ ಶಿಕ್ಷಕನಾಗಿ ಸೇವೆ ಸಲ್ಲಿಸುವಲ್ಲಿ ಶಿಕ್ಷಕರ ಪಾತ್ರ ತುಂಬಾ ಮುಖ್ಯವಾಗಿದೆ.

"ತಂದೆ ತೋರುವನು ಸದ್ಗುಣವ, ಗುರುರಾಯ
ಬಂಧನ ಕಳೆವ ಸರ್ವಜ್ಞ" ಎನ್ನುವಂತೆ ವಿದ್ಯಾರ್ಥಿಗಳ ಮುಂದಿನ ಮಾರ್ಗಸೂಚಕನಂತೆ ಅವರ ಬಾಳಿನ ದಾರಿ ದೀಪವಾಗಿರುತ್ತಾರೆ.

ಸ್ವಾಮಿ ವಿವೇಕಾನಂದರು ಹೇಳುವಂತೆ "Experience the only Teacher"

ಆಧುನಿಕ ಶಿಕ್ಷಣ ಭಾವಿಸುವಂತೆ ಮಗು ಏನೂ ಅಲ್ಲದ ಖಾಲಿ ವ್ಯಕ್ತಿಯಲ್ಲ, ಅದು ಸರ್ವಶಕ್ತಿ ಸಂಪನ್ನವಾದ ಒಂದು ಚೈತನ್ಯ, ಅದಕ್ಕೆ ಮುಸುಕಿರುವ ಆವರಣವನ್ನು ಪರಿಹರಿಸುವುದು ಮಾತ್ರ ಶಿಕ್ಷಕನ ಗುರಿಯಾಗಬೇಕು.

ಸ್ವಾಮಿ ವಿವೇಕಾನಂದರೆನ್ನುವಂತೆ –

Education is the manifestation of perfection already within man.

ಕಾರಣ ಮಗು ತಾನು ಆತ್ಮ ಸ್ವರೂಪ ಸರ್ವಶಕ್ತಿ ಸಂಪನ್ನ ಎಂಬ ಅರಿವನ್ನು ಪಡೆಯುವಂತೆ ಮಾಡುವುದೇ ಶಿಕ್ಷಕರ ಗುರಿಯಾಗಬೇಕು. ಲೌಕಿಕ ಶಿಕ್ಷಣದ ಮೂಲಕ ಅಲೌಕಿಕದತ್ತ ಮಗುವನ್ನು ಮುನ್ನಡೆಸಬೇಕು. ತಾನಾರೆಂಬುದನ್ನು ಆತನ ಸ್ವಶಕ್ತಿ, ಸ್ವಯಂ ಆಸಕ್ತಿ ಏನೆಂಬುದನ್ನು ಅರಿತುಕೊಳ್ಳುವ ಸಂಸ್ಕಾರವನ್ನು ನೀಡುವುದೇ ಶಿಕ್ಷಕನ ಕರ್ತವ್ಯ.

ಮಹಾಭಾರತದಲ್ಲಿ ಬರುವ ಏಕಲವ್ಯನು ದ್ರೋಣಾಚಾರ್ಯರ ಮೂರ್ತಿ ಮಾಡಿ ಆ ಮೂರ್ತಿಯೇ ತನ್ನ ಗುರುಗಳೆಂದು, ಭಾವಿಸಿ, ಬಿಲ್ವಿದ್ಯೆ ಕಲಿತದ್ದು ಗುರುವಿನ ಬಗ್ಗೆ ಗೌರವ ನಂಬಿಕೆಯಾಗಿದೆ.

ಕುವೆಂಪು ಗುರುವಿನ ಬಗ್ಗೆ ಹೀಗೆ ಹೇಳುತ್ತಾರೆ,

"ನಾನು ನಡೆದ ಹಾದಿಯನು ಹಿಂತಿರುಗಿ ನೋಡಿದರೆ
ಬಗೆಯ ಬಾಯಲಿ ನೆನಹುಗಳ ಮೆಲುಕಿ ಹಾಕಿದರೆ
ಹೆಜ್ಜೆ ಹೆಜ್ಜೆಗೂ ನೀನೆ ಕೈ ಹಿಡಿದು ನಡೆಸಿರುವೆ
ಎಂಬುದನ್ನು ನಾನರಿವೆ ನನ್ನ ಗುರುವೆ,

ಅವರು ನೆನಸುವ ಗುರುಗಳ ಬಗ್ಗೆ, ಅವರಿಗಿರುವ ಆತ್ಮಾಭಿಮಾನ ಎತ್ತಿ ಹಿಡಿಯುತ್ತದೆ.

ಇನ್ನೂ ಅಬ್ದುಲ್ ಕಲಾಂ ಶಿಕ್ಷಕರಿಗೆ
Learn
Teach
Share ಎಂಬ ಕಿವಿಮಾತು ಹೇಳುತ್ತಾರೆ. ಊರ ಶಾಲೆಗೆ ಶಿಕ್ಷಕರಾದರೇನು ವಿಶ್ವ ಶಾಲೆಗೆ ವಿದ್ಯಾರ್ಥಿ ಶಿಕ್ಷಕ. ಭೂಮಿ ಚಂದ್ರನ ನಡುವೆ ಅಂತರ ಹೇಳಿ ಕೊಡುವ ಶಿಕ್ಷಕ Head to Heart ಮನಮುಟ್ಟುವಂತೆ ಕಲಿಸುತ್ತಾನೆ.

ಸಂಸ್ಕೃತಿಯನ್ನು ಮತ್ತೆ ಎತ್ತಿ ಹಿಡಿಯುವ ಪ್ರಯತ್ನಿಸುವ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಶಿಕ್ಷಕರ ದಿನಾಚರಣೆಗೆ ವಿಶೇಷ ಮಹತ್ವ ಕೊಟ್ಟು ಮಕ್ಕಳು ಮತ್ತು ಶಿಕ್ಷಕರ ಜೊತೆ ನೇರ ಮಾತನಾಡುವ ಕಾರ್ಯಕ್ರಮ ತುಂಬಾ ಪ್ರಭಾವಯುತವಾಗಿದ್ದು, kill development, teacher and student relationship ಬಗ್ಗೆ ಹೇಳಿರುವ ಅವರ ಕಲೆಗೆ ತಲೆಬಾಗಲೇಬೇಕು.

**✍ ಲಲಿತಾ ಪಿ. ಅಂಗಡಿ**

ಒಬ್ಬ ವಿದ್ಯಾರ್ಥಿ ಕೆಟ್ಟರೆ ಅವನು ಮಾತ್ರ ಕೆಡುತ್ತಾನೆ. ಆದರೆ ಒಬ್ಬ ಶಿಕ್ಷಕ, ಅಧ್ಯಾಪಕ ಕೆಟ್ಟರೆ ಸಾವಿರಾರು ವಿದ್ಯಾರ್ಥಿಗಳು ಕೆಡುತ್ತಾರೆ. ಅಂತಹ ಶಿಕ್ಷಕರು ಸಮಾಜಕ್ಕೆ ಮಾರಕವಾಗುತ್ತಾರೆ. ಹಾಗಾದರೆ ಸಮಾಜದ ಮೂರು ತೀರಿಸಲಾರದ ಋಣಗಳಾದ ತಂದೆ–ತಾಯಿ, ಗುರುವಿನ ನಡುವಿನ ಬಾಂಧವ್ಯವನ್ನು ಕಾಯ್ದುಕೊಳ್ಳಬೇಕಾಗಿದೆ.

"ಮಾತೃದೇವೋಭವ", "ಪಿತೃದೇವೋಭವ", "ಆಚಾರ್ಯದೇವೋಭವ" ಎನ್ನುವಂತೆ ತಂದೆ – ತಾಯಿಯ ನಂತರ ಬರುವ ಶಿಕ್ಷಕರ ಕರ್ತವ್ಯವೂ ಮಹತ್ವಪೂರ್ಣವಾಗಿದೆ.

ಗುರುಕುಲ, ಶಾಂತ ನಿಕೇತನ, ಹಿಡಿದು Electronic, computer, laptop mobile ಗುರುಗಳ ಮಾರ್ಗದರ್ಶನವನ್ನು ಸಕಾರಾತ್ಮವಾಗಿ ಅಳವಡಿಸಿಕೊಂಡು ಮಕ್ಕಳಿಗೆ ಹೇಳಿದರೆ, ಮಕ್ಕಳು ಸನ್ಮಾರ್ಗದತ್ತ ಹೋಗಲು ಶಿಕ್ಷಕರು ಮತ್ತು ಪಾಲಕರು ಸಹ ಅನುಸರಿಸಿದರೆ, ಮಕ್ಕಳ ಉಜ್ವಲ ಭವಿಷ್ಯ ಸಾಕಾರಗೊಳ್ಳುವುದರಲ್ಲಿ ಅನುಮಾನವೇ ಇಲ್ಲ. ಇಂತಹ ಒಳ್ಳೆಯ ವೃತ್ತಿಯಲ್ಲಿ ಸೇವೆ ಸಲ್ಲಿಸಿ, ಶಿಕ್ಷಕರ ಕರ್ತವ್ಯ ಪಾಲನೆಯಲ್ಲೂ ತಮ್ಮ ದಿನಾಚರಣೆಯ ಅಂಗವಾಗಿ ಆಚರಿಸಲು ಹೇಳಿದ ಡಾ। ರಾಧಾಕೃಷ್ಣರು ಇಂದು ನಮ್ಮೊಂದಿಗೆ ಇಲ್ಲ. ಆದರೆ ಇಡೀ ದೇಶ ಅವರೊಂದಿಗೆ ಇಂದು ಈ ಆಚರಣೆಯನ್ನು ಆಚರಿಸುತ್ತೇವೆ. ಇಂತಹ ಮಹಾನ್ ವ್ಯಕ್ತಿಯ ಜನ್ಮದಿನದ ಆಚರಣೆಗೆ ಮತ್ತು ಗಣಪತಿ ಜಯಂತಿಗೆ ನಾವೆಲ್ಲಾ ಪ್ರಣಾಮ ಸಲ್ಲಿಸಲೇ ಬೇಕು. ಸಮಸ್ತ ಶಿಕ್ಷಕರಿಗೆ ಶರಣು ಶರಣಾರ್ಥಿ.

# ಅಸೋಸಿಯೇಷನ್‌ನಲ್ಲಿ ಸಂಭ್ರಮದ ಗಣೇಶೋತ್ಸವ















Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting: 10/11th of every month
at Mumbai Patrika Channel Sorting Office G.P.O.

## ಓಟ್ಸ್ ಲಾಡು

ಓಟ್ಸ್‌ನಿಂದ ತಯಾರಿಸಲಾಗುವ ಈ ಲಡ್ಡು ನಿಮ್ಮ ಡಯೆಟ್‌ಗೂ ಸಹಕಾರಿ ಎಂದೆನಿಸಿದ್ದು ಅಧಿಕ ಕೊಲೆಸ್ಟ್ರಾಲ್ ಭಯವಿಲ್ಲದೆ ಹಬ್ಬದ ಸಿಹಿಯನ್ನು ಸೇವಿಸಲು ಅನುಕೂಲವನ್ನು ಮಾಡಿಕೊಡುತ್ತದೆ.

ಸಾಮಾಗ್ರಿಗಳು:

ಓಟ್ಸ್ – 1 ಕಪ್
ಬೆಲ್ಲ – 1/2 ಕಪ್
ಬಿಳಿ ಎಳ್ಳು – 2 ಚಮಚ
ತುಪ್ಪ – 2 ರಿಂದ 3 ಚಮಚ
ಹಸಿರು ಏಲಕ್ಕಿ ಹುಡಿ – 1 ಚಮಚ
ಒಣದ್ರಾಕ್ಷಿ – 20
ಕೋಯಾ – 1 ಕಪ್
ಬಾದಾಮ್ – 5



ವಿಧಾನ: ನಾನ್ ಸ್ಟಿಕ್ ಪ್ಯಾನ್ ಅನ್ನು ತೆಗೆದುಕೊಂಡು ಕಡಿಮೆ ಉರಿಯಲ್ಲಿ ಎಳ್ಳನ್ನು ಹುರಿದುಕೊಳ್ಳಿ. ನಂತರ ಬಾದಾಮ್ ಅನ್ನು ಕೊಂಚ ಸಮಯ ಹುರಿಯಿರಿ. ಇದನ್ನು ಪಕ್ಕದಲ್ಲಿಟ್ಟು, ಪ್ಯಾನ್‌ನಲ್ಲಿ ಓಟ್ಸ್ ಅನ್ನು ತೆಗೆದುಕೊಂಡು ಹುರಿಯಿರಿ. ಸಾಮಾನ್ಯ 5 ನಿಮಿಷ ಹುರಿದುಕೊಳ್ಳಿ. ಇದು ಸಂಪೂರ್ಣವಾಗಿ ತಣ್ಣಗಾದ ನಂತರ ಮಿಕ್ಸರ್‌ನಲ್ಲಿ ಹುಡಿ ಮಾಡಿ. ಪ್ಯಾನ್ ನಲ್ಲಿ ಸ್ವಲ್ಪ ತುಪ್ಪವನ್ನು ಹಾಕಿ ಬೆಲ್ಲ ಮತ್ತು ಏಲಕ್ಕಿ ಹುಡಿಯನ್ನು ಸೇರಿಸಿಕೊಳ್ಳಿ. ಬೆಲ್ಲ ಸಂಪೂರ್ಣವಾಗಿ ಕರಗುವವರೆಗೆ ಕಾಯಿಸಿರಿ. ಮಿಶ್ರಣವನ್ನು ಚೆನ್ನಾಗಿ ಕಲಕುತ್ತಾ ಇರಿ. ಇದರಿಂದ ತಳ ಹಿಡಿಯುವುದಿಲ್ಲ. ಇದಕ್ಕೆ ಓಟ್ಸ್ ಮತ್ತು ನಟ್ಸ್ ಮತ್ತು ಎಳ್ಳನ್ನು ಬೆಲ್ಲಕ್ಕೆ ಹಾಕಿ ಚೆನ್ನಾಗಿ ಕಲಸಿಕೊಳ್ಳಿ. ಈ ಮಿಶ್ರಣ ಅಂಟಾಂಟಾಗಿದೆ ಎಂಬುದಾಗಿ ನಿಮಗೆ ಕಂಡು ಬಂದಲ್ಲಿ ಇದಕ್ಕೆ ಬೇಕಾಗುವಷ್ಟು ನೀರು ಸೇರಿಸಿ. ಮಿಶ್ರಣಕ್ಕೆ ಕೋಯಾವನ್ನು ಸೇರಿಸಿ ಮತ್ತು ಕರಗಲು ಬಿಡಿ. ಚೆನ್ನಾಗಿ ಮಿಶ್ರಣ ಮಾಡಿ. ಇದರಿಂದ ಗಂಟು ಕಟ್ಟುವುದಿಲ್ಲ. ಪ್ಯಾನ್‌ನಿಂದ ಎಲ್ಲ ಮಿಶ್ರಣ ಬಿಡಲು ಆರಂಭಗೊಳ್ಳುತ್ತಿದ್ದಂತೆ, ಗ್ಯಾಸ್ ಆಫ್ ಮಾಡಿ. 2–3 ನಿಮಿಷಗಳ ಕಾಲ ಕಾದು, ಮಿಶ್ರಣದಿಂದ ಸಣ್ಣ ಸಣ್ಣ ಉಂಡೆಗಳನ್ನು ಮಾಡಿಕೊಳ್ಳಿ. ದ್ರಾಕ್ಷಿ ಮತ್ತು ಬಾದಾಮಿಯಿಂದ ಲಾಡಗಳನ್ನು ಸಿಂಗರಿಸಿ. ಈಗ ನಿಮ್ಮ ಓಟ್ಸ್ ಲಾಡು ಸವಿಯಲು ಸಿದ್ಧವಾಗಿದೆ.

## FORTHCOMING PROGRAMMES

**October 22, 2016 at 2.00 p.m. -** Book Release Function on Kannada Screen Idol Natasarvabhauma Padmavibhushan Dr. Raj Kumar by Doddahulluru Rukkoji, Cinema Critic.

**November 6, 2016 at 5.30 p.m. –** Karnataka Rajyotsava celebration with Sri. Nagatihalli Chandrashekhar and all other Kannada organization in Mumbai. Nagatihalli's latest Kannada Movie – "ISHTAKAMYA" will be screened and a discussion will be held with the director later followed by dinner. Limited Seats Interested Association members should contact office for passes on 01 and 02 November 2016 between 4.00 p.m. to 7.00 p.m.




## NAMES OF NITYA POOJA DETAILS FROM 01.11.2016 TO 30.11.2016

| Name | Date of Pooja | Gotra | Nakshatra | |
|---|---|---|---|---|
| Kannada & Culture Dept. B'lore | November 1, 2016 | | | |
| Late Sri. Suryanarayan<br>Sri. P.N.Rama Rao<br>Satish Bhargav | November 2, 2016 | Kaundinya<br>Haritsa | Kritika Jeshta | |
| Raghavendra Upadhyaya &<br>Lata R. Upadhyaya | November 3, 2016 | Haritsa & Haritsa | Pushya & Punarvasu | |
| Suresh N. Rao | November 8, 2016 | | | |
| Late. Suryanarayana | November 10, 2016 | Kaundinya | | |
| Usha R. Rao | November 14, 2016 | Haritsa | Mrigashira | |
| 1. B.G. Srinivas<br>2. S.G. Nagabushan | November 15, 2016 | 1. Kutsa | 1. Rohini<br>2. Haritsa | 2. Revathi |
| | Master Bharat Jairam | November 19, 2016 | Bhardwaj | Pushya |

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938